ಅಧ್ಯಕ್ಷರು : ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಕಾಲದಲ್ಲಿ ತಾವು ಪ್ರಸ್ತಾಪ ಮಾಡಿ. ದಯಮಾಡಿ ಈಗ ಮಾನ್ಯ ಕಾರಜೋಳರವರ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವ ಕಾಲದಲ್ಲಿ ನಾನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು : ಆಯಿತು. ಈಗ 11–00 ಗಂಟೆಯವರೆವಿಗೆ ಚರ್ಚೆ ನಡೆಯಲಿ. ದಯಮಾಡಿ ಎಲ್ಲಾ ಶಾಸಕರುಗಳು ಸಹಕರಿಸಬೇಕು. ಎಲ್ಲಾ ಸದಸ್ಯರುಗಳು 5–5 ನಿಮಿಷಗಳ ಕಾಲ 3–4 ಜನ ಸದಸ್ಯರು ಚರ್ಚೆ ಮಾಡಲಿ.

ಶ್ರೀ ಗೋವಿಂದ ಎಂ. ಕಾರಜೋಳ : ಈ ರಾಜ್ಯದಲ್ಲಿ ಸುಮಾರು 8 ಲಕ್ಷ....

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವ ಲಿಸ್ಟ್‌ನಲ್ಲಿದ್ದೇನೆ. ಅವರಿಗೆ ತಾವು ಮತ್ತೆ ಪುನಃ ಪುನಃ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ. ನಾವೇನು ಮಾಡಬೇಕು ಹೇಳಿ. ನಾನು ತಮ್ಮ ಹತ್ತಿರ ಕೇಳುವುದನ್ನು ಬಿಟ್ಟು ಇನ್ನು ಯಾರ ಹತ್ತಿರ ಹೇಳಬೇಕು.

ಅಧ್ಯಕ್ಷರು : ಆಯಿತು. ದಯಮಾಡಿ ತಾವು ಕುಳಿತುಕೊಳ್ಳಿ.

2. ವಿತ್ತೀಯ ಕಾರ್ಯಕಲಾಪಗಳು

2004-05ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂದು)

† **ಶ್ರೀ ಗೋವಿಂದ ಎಂ. ಕಾರಜೋಳ** : ಈ ರಾಜ್ಯದಲ್ಲಿ 8 ಲಕ್ಷ ಜನ ನೇಕಾರರು ನೇಕಾರಿಗೆ ಉದ್ಯೋಗವನ್ನೇ ಅವಲಂಬಿಸಿ ಜೀವನ ಮಾಡತಕ್ಕಂತಹವರು ಇದ್ದಾರೆ. ಕಳೆದ 10 ತಿಂಗಳಿಂದ ಅವರಿಗೆ ಸರ್ಕಾರ ಉದ್ಯೋಗವನ್ನು ಕೊಡುವುದರಲ್ಲಿ ವಿಫಲವಾದುದರಿಂದಾಗಿ ಅವರು ಬಹಳ ಸಂಕಷ್ಟದಲ್ಲಿದ್ದಾರೆ. ಈ ವಿಷಯದ ಬಗ್ಗೆ ನಾನು ಹಿಂದಿನ ಅಧಿವೇಶನದಲ್ಲಿಯೂ ಕೂಡ ಈ ಸದನದಲ್ಲಿ ಪ್ರಸ್ತಾಪವನ್ನು ಮಾಡಿದ್ದೆ.

ನೇಕಾರರು ಇವತ್ತು ಉದ್ಯೋಗವಿಲ್ಲದೆ ಹಳ್ಳಿಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಿಭೂತಿ ಮತ್ತು ಕರ್ಪೂರ ಅಗರಬತ್ತಿ ಮಾರಾಟ ಮಾಡಿಕೊಂಡು ಲಾಟರಿ ಟಿಕೇಟನ್ನು ಮಾರುವವರ ತರಹ ರಸ್ತೆಯಲ್ಲಿ ಅಲೆಯುತ್ತಿದ್ದಾರೆ. ಅದರ ಬಗ್ಗೆ ಈ ವಿಷಯವನ್ನು ಗಮನಕ್ಕೆ ತಂದಾಗ ಮಾನ್ಯ ಹಣಕಾಸಿನ ಸಚಿವರು 72 ಕೋಟಿ ರೂಪಾಯಿಗಳನ್ನು ಸಮವಸ್ತ್ರವನ್ನು ಪೂರೈಸುವುದನ್ನು ಕೆಹೆಚ್‌ಡಿಸಿಗೆ ಆದೇಶವನ್ನು ಮಾಡಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ, ಆದರೆ ನಾನು ಮಾನ್ಯ ಹಣಕಾಸಿನ ಸಚಿವರಲ್ಲಿ ದಯಮಾಡಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬರೀ ಆದೇಶವನ್ನು ಕೊಟ್ಟರೆ **ಕೆಹೆಚ್‌ಡಿಸಿ**ಯವರು ಇವತ್ತು ನೇಕಾರಿಕೆಯನ್ನು ಪ್ರಾರಂಭ ಮಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. **25 ಪರ್ಸೆಂಟ್** ಆದರೂ ಅಡ್ವಾನ್ಸ್ ಹಣವನ್ನು ಕೊಟ್ಟರೆ ಮಾತ್ರ ಅವರು ಮಾಡುವುದಕ್ಕೆ ಸಾಧ್ಯವಿದೆ. ತಮಗೆ ಗೊತ್ತಿರುವ ಹಾಗೆ ಈಗ ಕೆಹೆಚ್‌ಡಿಸಿ ನಷ್ಟದಲ್ಲಿರತಕ್ಕಂತಹ ಸಂಸ್ಥೆ. ಇದುವರೆವಿಗೂ ಸುಮಾರು 43 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿದೆ. ಅವರ ಹತ್ತಿರ ವರ್ಕಿಂಗ್ ಕ್ಯಾಪಿಟಲ್ ಇಲ್ಲ, ಅದಕ್ಕಾಗಿ. ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯಮಾಡಿ ಅವರ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಅವರಿಗೆ ಅಡ್ವಾನ್ಸ್ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನೇಕಾರರಿಗೆ ಅಗತ್ಯವಾಗಿ ಆಗಬೇಕಾದಂತಹ ಕೆಲಸವೆಂದರೆ, ಸುಮಾರು 10 ಮಗ್ಗಗಳಿಗಾದರೂ

ನೆರೆ ರಾಜ್ಯದಲ್ಲಿ ಏನು ವಿದ್ಯುತ್‌ನ್ನು ಪೂರೈಸುತ್ತಿದ್ದಾರೋ ಸಬ್ಸಿಡಿ ರೇಟ್‌ನಲ್ಲಿ, ಅದೇ ರೀತಿಯಲ್ಲಿ ನಮ್ಮಲ್ಲಿಯೂ ಕೂಡ ಮಾಡಬೇಕು. ಮಹಾರಾಷ್ಟ್ರದವರು ಯಾವ ರೇಟ್‌ಗೆ ಕೊಟ್ಟಿದ್ದಾರೋ, ಆಂಧ್ರದವರು ಯಾವ ರೇಟ್‌ಗೆ ಕೊಟ್ಟಿದ್ದಾರೋ, ಅದೇ ರೇಟ್‌ಗೆ ನಮ್ಮಲ್ಲಿಯೂ ಕೂಡ ವಿದ್ಯುತ್‌ನ್ನು ಪೂರೈಸುವ ಬಗ್ಗೆ ಮಾನ್ಯ ಅರ್ಥ ಸಚಿವರು ಉತ್ತರ ಕೊಡುವಂತಹ ಕಾಲದಲ್ಲಿ ಪ್ರಕಟಿಸುತ್ತಾರೆ ಎಂಬ ಆಶಾಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇನ್ನು ನೇಕಾರರ ಮಕ್ಕಳಿಗೆ ಏನು ವಿದ್ಯಾಭ್ಯಾಸಕ್ಕಾಗಿ ಕೆಲವೊಂದು ಸವಲತ್ತುಗಳನ್ನು ಕೊಡಬೇಕೆಂದು ಈಗಾಗಲೇ ಮನವಿ ಪತ್ರದಲ್ಲಿ ನಾವು ಬರೆದು ಸರ್ಕಾರಕ್ಕೆ ಮನವಿಯನ್ನು ಮಾಡಿದ್ದೇವೆ. ಅದನ್ನೂ ಕೂಡ ಸರ್ಕಾರ ಕನ್ಸಿಡರ್ ಮಾಡಬೇಕು, ನೇಕಾರರಿಗೆ 60 ವರ್ಷ ದಾಟಿದ ನಂತರ ಕೆಲಸ ಮಾಡುವಂತಹ ಶಕ್ತಿಯಿರುವುದಿಲ್ಲ, ಅವರಿಗೆ ವಿಶ್ರಾಂತಿ ವೇತನವನ್ನೂ ಕೂಡ ಸರ್ಕಾರ ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇನ್ನು ಕೆಲವು ಕಾಂಗ್ರೆಸ್ಸಿನವರು ತಮ್ಮ ಚುನಾವಣೆಯ ಕಾಲದಲ್ಲಿ ತಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದರು, ಆ ವಿಷಯಕ್ಕೆ ಬರುತ್ತೇನೆ, ಈ ನಿರುದ್ಯೋಗಿ ಪದವೀಧರರಿಗೆ, ಸುಮಾರು 5 ಲಕ್ಷ ಪದವೀಧರರಿಗೆ ನಾವು ಪ್ರತಿ ತಿಂಗಳು 500 ರೂಪಾಯಿಗಳನ್ನು ನಿರುದ್ಯೋಗ ಭತ್ಯೆಯನ್ನು ಕೊಡುತ್ತೇವೆಂದು ಹೇಳಿದ್ದರು. ಸರ್ಕಾರದ ಕೈಯಲ್ಲಿ ಅದನ್ನು ಕೊಡುವುದಕ್ಕಾಗಲಿಲ್ಲ. ಈ ಬಜೆಟ್‌ನಲ್ಲಿ ಅದಕ್ಕಾಗಿ ಹಣವನ್ನು ಮೀಸಲಾಗಿಟ್ಟಿಲ್ಲ. ನಾನು ಅದಕ್ಕಾಗಿ ಸರ್ಕಾರದಲ್ಲಿ ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಕನಿಷ್ಟ 5 ಲಕ್ಷ ಜನರಿಗೆ ಕೊಡುವುದಕ್ಕಾಗದೆ ಹೋದರೂ ಕೂಡ ಒಂದು ಲಕ್ಷ ಜನರಿಗಾದರೂ ಕೂಡ ಕೊಡಬಹುದಲ್ಲಾ? ಯಾರು ಆರ್ಥಿಕವಾಗಿ ಹಿಂದುಳಿದಿದ್ದಾರೆ, ಪರಿಶಿಷ್ಟ ಜನಾಂಗದವರು ಇದ್ದಾರೆ, ಅಲ್ಪಸಂಖ್ಯಾತರು ಇದ್ದಾರೆ, ಅವರಿಗಾದರೂ ಈ ಭತ್ಯೆಯನ್ನು ಕೊಟ್ಟರೆ ಅನುಕೂಲವಾಗುತ್ತದೆ. ಈಗಾಗಲೇ ತಾವು ಏನು ಪ್ರಕಟ ಮಾಡಿದ್ದೀರಿ ಅದಕ್ಕೆ ಸಂಬಂಧಪಟ್ಟಂತೆ ಒಂದು ಕಾರ್ಯಕ್ರಮವನ್ನು ಮಾಡಿದರೆ ಅದಕ್ಕೊಂದು ಅರ್ಥ ಬರುತ್ತದೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಸುಮಾರು ಒಂದು ಲಕ್ಷ ಜನರಿಗೆ ನಿರುದ್ಯೋಗ ಭತ್ಯೆ ಕೊಡುವುದರಿಂದ ಇದರಿಂದ ಏನೂ ಬಹಳ ಖರ್ಚು ಬರುವುದಿಲ್ಲ. ಈಗಾಗಲೇ 7 ತಿಂಗಳು ಮುಗಿದುಹೋಗಿದೆ, ಇನ್ನು 5 ತಿಂಗಳಿಗೆ 35 ಕೋಟಿ ರೂಗಳು ಬರುತ್ತದೆ. ಹೇಗಿದ್ದರೂ ಕೂಡ ತಾವು ಉಳಿತಾಯ 72 ಕೋಟಿ ರೂಗಳ ಬಜೆಟ್‌ನ್ನು ಮಂಡಿಸಿದ್ದೀರಿ. ಅದರಲ್ಲಿ 35 ಕೋಟಿ ರೂಪಾಯಿಗಳನ್ನು ಅದರಲ್ಲಿ ಮೀಸಲಾಗಿಟ್ಟರೆ ಕೊಡುವುದಕ್ಕೆ ಸಾಧ್ಯವೆಂದು ನಾನು ತಮ್ಮಲ್ಲಿ ಕೇಳುತ್ತೇನೆ. ನಮ್ಮ ಕನ್ನಡ ಚಳುವಳಿ ನಾಯಕರಾದ ಶ್ರೀ ವಾಟಾಳ್ ನಾಗರಾಜ್ ಇಡೀ ಜೀವನವೆಲ್ಲಾ ಕನ್ನಡಕ್ಕಾಗಿ ಹೋರಾಟ ಮಾಡಿದ್ದಾರೆ. ಕನಿಷ್ಠ ಪಕ್ಷ ಕನ್ನಡದಲ್ಲಿ ಯಾರು ಬಿ.ಎ, ಎಂ.ಎ. ಓದಿದ್ದಾರೆ ಅಂತಹವರಿಗಾದರೂ ಕೊಡುವುದಕ್ಕೆ ಸಾಧ್ಯವಿದೆಯಾ? ಅವರ ಸಂಖ್ಯೆ ಬಹಳ ಜಾಸ್ತಿಯಾಗುವುದಿಲ್ಲ, ಕನ್ನಡದಲ್ಲಿ ಬಿ.ಎ. ಓದಿದವರ ಸಂಖ್ಯೆ: ಈ ರಾಜ್ಯದಲ್ಲಿ 8392 ಇದೆ, ಎಂ.ಎ. ಕನ್ನಡದಲ್ಲಿ ಓದಿದವರ ಸಂಖ್ಯೆ 1200 ಜನರು ಇದ್ದಾರೆ. ಎರಡೂ ಸೇರಿದರೆ ಸುಮಾರು 10 ಸಾವಿರ ಆಗುತ್ತದೆ. ಇದನ್ನು ಮಾಡುವುದರಿಂದ ಅವರಿಗಾದರೂ ಬಹಳ ಖುಷಿಯಾಗುತ್ತದೆ. ಇವತ್ತು ಅವರಿಗೆ ವಯಸ್ಸಾಗಿದೆ, ಈ ಮುಪ್ಪಾವಸ್ಥೆಯ ಅವರು ಖುಷಿ ಪಟ್ಟು ಮನೆಗೆ ಹೋಗುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆ ಒಂದು ಲಕ್ಷ ಜನರಿಗೆ ನಿರುದ್ಯೋಗ ಭತ್ಯೆ ಕೊಡಲು ಸಾಧ್ಯವಿಲ್ಲದಿದ್ದರೆ, ಇದನ್ನಾದರೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಯಾರಿಗೆ ವಯಸ್ಸಾಗಿದೆ?

ಶ್ರೀ ಗೋವಿಂದ ಎಂ. ಕಾರಜೋಳ : ನಿಮಗಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಆ ಪದವನ್ನು ಹಿಂತೆಗೆದುಕೊಳ್ಳದಿದ್ದರೆ ನಾವು ತೀವ್ರವಾಗಿ ನಿಮ್ಮ ವಿರುದ್ಧ ಹೋರಾಟವನ್ನು ಮಾಡಬೇಕಾಗುತ್ತದೆ. ನೀವು ಆ ಪದವನ್ನು ಕೂಡಲೇ ವಾಪಸ್ಸು ತೆಗೆದುಕೊಳ್ಳಬೇಕು. ನಾವು ಯಾವುದೋ ಒಂದು ಕಡೆ ಗಮನದಲ್ಲಿದ್ದಾಗ ನೀವು ನನ್ನ ವಿಚಾರವನ್ನು ತೆಗೆದುಕೊಂಡು..

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ವಯಸ್ಸಾದ ಮೇಲೆ ಯೌವನ ಬರುತ್ತಿದೆ. ಅದರ ಬಗ್ಗೆ ಮಾನ್ಯ ಕಾರಜೋಳರವರಿಗೆ ಗೊತ್ತಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ಆ ತರಹ ಹೇಳಿದವರು ಯಾರು? ನಿಮಗೆ ಆ ಅಧಿಕಾರ ಕೊಟ್ಟವರು ಯಾರು? ದಯವಿಟ್ಟು ಅದರ ಬಗ್ಗೆ ಹೇಳಬೇಕು. ನಾನು ತಮ್ಮನ್ನು ಬಿಡುವುದಿಲ್ಲ. ಇಲ್ಲ ನಮ್ಮ ನಿಮ್ಮ ಸ್ನೇಹದಲ್ಲಿ ಈಗ ತಾವು ಹೇಳಬೇಕು, ಅವರಿಗೆ ವಯಸ್ಸಾಗಿಲ್ಲವೆಂದು ತಾವು ಹೇಳಬೇಕು. ಇಲ್ಲದಿದ್ದರೆ ಆಗುವುದಿಲ್ಲ. ಇಲ್ಲದೆ ಹೋದರೆ ನಾನು ನಿಮ್ಮನ್ನು ಬಿಡುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ಇಡೀ ಜೀವಮಾನವೆಲ್ಲಾ ಹೋರಾಟವನ್ನು ಮಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಾನು ಇನ್ನೂ 50 ವರ್ಷ ಹೋರಾಟವನ್ನು ಮಾಡಬೇಕೆಂದು ಇದ್ದೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ನಿಮ್ಮ ವಯಸ್ಸು ಎಷ್ಟು ಎಂಬುದನ್ನು ಹೇಳಿ ಸ್ವಾಮಿ.

ಶ್ರೀ ಗೋವಿಂದ ಎಂ. ಕಾರಜೋಳ : ಅಷ್ಟೇ ಮಾಡೋಣ ಸ್ವಾಮಿ. ಆಗಲಿ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಕಾರಜೋಳರವರೆ, ನಿನ್ನೆ ದಿವಸ ಇವರ ವಯಸ್ಸಿನ ಬಗ್ಗೆ ಚರ್ಚೆಯಾಗಿತ್ತು.

ಶ್ರೀ ಗೋವಿಂದ ಎಂ. ಕಾರಜೋಳ : ನನಗೆ ಗೊತ್ತಿದೆ. ಅವರು ರಾಮಚಂದ್ರ ವೀರಪ್ಪನವರು, ಒಂದು ನಿಮಿಷ....

ಶ್ರೀ ವಾಟಾಳ್ ನಾಗರಾಜ್ : ಕನಿಷ್ಟ ಪಕ್ಷ ಇನ್ನೂ 5 ಬಾರಿಯಾದರೂ ಶಾಸನಸಭೆಗೆ ಬರಬೇಕೆಂದು ಇದ್ದೇನೆ. ತಾವು ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅದು ಆಗುವುದಿಲ್ಲ. ನನಗೆ ವಯಸ್ಸಾಗಿಲ್ಲವೆಂದು ತಾವು ಹೇಳಲೇಬೇಕು. ಸಾರ್ವಜನಿಕರಲ್ಲಿ ವಾಟಾಳ್ ನಾಗರಾಜ್..

ಅಧ್ಯಕ್ಷರು : ಕಾರಜೋಳ್‌ರವರೆ, ಇನ್ನು ಮಾನ್ಯ ವಾಟಾಳ್ ನಾಗರಾಜ್ ಬಾಲಕರು ಎಂದು ಹೇಳಿ. ಅವರು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾರೆಂದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಹೇಳಿದ್ದೇನೆಂದರೆ ಇಡೀ ಜೀವನ ಹೋರಾಟದಲ್ಲಿ ಕಳೆದಿದ್ದಾರೆ ಎಂದು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ವಾಟಾಳ್ ನಾಗರಾಜ್‌ರವರು ವಯಸ್ಸಾಗಿಲ್ಲವೆಂದು ನೀವು ಫೀಲ್ ಮಾಡಿಕೊಳ್ಳುತ್ತಿದ್ದೀರಿ. ಇವರು ವಯಸ್ಸನ್ನು ಯಾವತ್ತೂ ಕೂಡ

ಹೇಳುವುದೇ ಇಲ್ಲಾ. ಡಾಕ್ಟರ್ ಕೈಯಲ್ಲಿ ಇವರ ವಯಸ್ಸೆಷ್ಟು ಎಂದು ಪರೀಕ್ಷೆ ಮಾಡಿಸೋಣ ಅಷ್ಟಾದರೂ ಹೇಳುವುದಕ್ಕೆ ಒಪ್ಪಿಕೊಳ್ಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ನನಗೆ ನಿಮ್ಮ ಬಗ್ಗೆ ಬಹಳ ಗೌರವವಿದೆ, ಈಗ ನಾವು ಮತ್ತು ನೀವು ಎಷ್ಟು ದಿವಸಗಳ ಕಾಲ ಈ ಶಾಸನಸಭೆಗೆ ಬರುತ್ತೀರೋ ಅಷ್ಟು ದಿವಸ ಇರುತ್ತೇನೆ ನಾನು. ಅದರ ಬಗ್ಗೆ ಬದಲಾವಣೆ ಇಲ್ಲವೇ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಶಾಸನ ಸಭೆ ಇರುವವರೆಗೂ ಇರಬೇಕು.

ಶ್ರೀ ವಾಟಾಳ್ ನಾಗರಾಜ್ : ಸಾರ್ವಜನಿಕವಾಗಿ ವಯಸ್ಸಾಯಿತು ಎಂದರೆ ಈ ಮಾತು ಸರಿಯಿಲ್ಲ ಸಾರ್. ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಏನಾಗಿದೆ ಎಂದರೆ ಅವರು ಮದುವೆಯನ್ನು ಮಾಡಿಕೊಂಡರಲ್ಲಾ ಅವತ್ತು ಏನು ವಯಸ್ಸು ಇತ್ತೋ ಅದೇ ವಯಸ್ಸು ಇವತ್ತಿಗೂ ಕೂಡ ಇದೆ.

ಶ್ರೀ ವಾಟಾಳ್ ನಾಗರಾಜ್ : ಕರೆಕ್ಟ್. ನೀವು ಅಷ್ಟನ್ನು ಹೇಳಿದರೆ ಇಡೀ ನಾಡಿನ ಜನತೆಯ ಪರವಾಗಿ ತಮಗೆ ಸ್ವಾಗತ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ವಾಟಾಳ್‌ರವರ ವಯಸ್ಸನ್ನು ಯಾರೂ ಕೇಳುವುದು ಬೇಡ. ಅವರನ್ನು ಕೇಳಿಬಿಟ್ಟರೆ ಅವರೇ ಹೇಳಿಬಿಡುತ್ತಾರೆ. ಆಗ ಅವರ ವಯಸ್ಸಿನ ಬಗ್ಗೆ ಗೊತ್ತಾಗುತ್ತದೆ. ಇದರ ಬಗ್ಗೆ ಕ್ಲಾರಿಫೈ ಕೊಟ್ಟಿಬಿಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಅವರು ವಯಸ್ಸಿನ ಬಗ್ಗೆ ಗುಟ್ಟನ್ನು ಬಿಟ್ಟುಕೊಡುವುದಿಲ್ಲ. ಎರಡನ್ನು ಮಾತ್ರ ಅವರು ಬಿಟ್ಟುಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮತ್ತೆ ಇದರ ಬಗ್ಗೆ ವ್ಯಾಖ್ಯಾನ ಮಾಡುವುದು ಬೇಡ. ನಾನು ನಿಮ್ಮೆಲ್ಲರಿಗಿಂತ ಈ ಸದನದ ಎಲ್ಲರಿಗಿಂತ ಚಿಕ್ಕವನಾಗಿದ್ದೇನೆ.

ಅಧ್ಯಕ್ಷರು : ಕಾರಜೋಳರವರೆ, ತಾವು ಪ್ರಾರಂಭಿಸಿ 11 ಗಂಟೆಗೆ ಚರ್ಚೆ ಮುಗಿಯಬೇಕು.

ಶ್ರೀ ಬಾದರ್ಲಿ ಹಂಪನಗೌಡ : ಹೆಣ್ಣಿಗೆ ಯೌವನ ಬರುತ್ತಂತೆ ಅದರಂಗೆ ಅವರ ಮುಪ್ಪಿಗೆ ಯೌವನ ಬಂದಿದೆ. ಅದಕ್ಕಾಗಿ ನೀವು ಏತಕ್ಕೆ ಅವರ ವಯಸ್ಸನ್ನು ಕೆಣಕುತ್ತೀರಿ?

ಶ್ರೀ ಗೋವಿಂದ ಎಂ. ಕಾರಜೋಳ : ಮುಪ್ಪು ಅವರಿಗೆ ನಿಂತುಹೋಗಿದೆ.

ಶ್ರೀ ವಾಟಾಳ್ ನಾಗರಾಜ್ : ಮುಪ್ಪಾಗಿರುವವರೆಲ್ಲರೂ ನನ್ನ ಪರವಾಗಿ ವಾದ ಮಾಡುತ್ತಿದ್ದಾರೆ.

ಅಧ್ಯಕ್ಷರು : ಕಾರಜೋಳರವರೆ, ತಾವು ಬೇಗನೆ ಮುಗಿಸಿ.

ಶ್ರೀ ಗೋವಿಂದ ಎಂ. ಕಾರಜೋಳ : ಇವತ್ತು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಕನಿಷ್ಟ ಪಕ್ಷ ಯಾರೂ ಕನ್ನಡಲ್ಲಿ ಬಿ.ಎ. ಹಾಗೂ ಎಂ.ಎ. ಓದಿದ್ದಾರೆ ಅವರ ಸಂಖ್ಯೆ: 10 ಸಾವಿರ ಇದೆ, ಅವರಿಗೆ ಸರ್ಕಾರ ಪ್ರತಿ ತಿಂಗಳು ಹಣವನ್ನು ಕೊಟ್ಟರೆ 50 ಲಕ್ಷ ರೂಗಳು ಬರುತ್ತದೆ. ಇನ್ನು ಉಳಿದಿರುವುದು ಕೇವಲ 5 ತಿಂಗಳು ಮಾತ್ರ. ಎರಡೂವರೆ ಕೋಟಿ ರೂಪಾಯಿಗಳನ್ನಾದರೂ ಬಜೆಟ್‌ನಲ್ಲಿ ತಾವು ನಿರುದ್ಯೋಗ ಭತ್ಯೆಗೆ ಇಡಬೇಕಲ್ಲಾ? ವಾಟಾಳ್ ನಾಗರಾಜ್‌ರವರು ಏನು ಹೋರಾಟ ಮಾಡಿಕೊಂಡು ಬಂದಿದ್ದಾರೆ, ಆ ಹೋರಾಟಕ್ಕೆ ಜಯ

ಸಿಕ್ಕಿದಹಾಗೆ ಆಗುತ್ತದೆ. ಕನಿಷ್ಟ ಪಕ್ಷ ಬಿ.ಎ, ಎಂ.ಎ. ಓದಿದವರಿಗೆ ಕೊಟ್ಟರೆ ಆಗುತ್ತದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಇನ್ನು ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ಹೇಳುವುದಾದರೆ, ಇದೇ ಸದನದಲ್ಲಿ ಹಿಂದಿನ ಸಮಾಜಕಲ್ಯಾಣ ಸಚಿವರಾದಂತಹ ಶ್ರೀ ಕಾಗೋಡು ತಿಮ್ಮಪ್ಪನವರು ನವೆಂಬರ್ 21–2001ರಂದು ಪ್ರಕಟ ಮಾಡಿದ್ದರು. ಈ ರಾಜ್ಯದಲ್ಲಿ 25 ಸಾವಿರ ಬ್ಯಾಕ್‌ಲಾಗ್ ಹುದ್ದೆಗಳಿವೆ ಎಂದು ಹೇಳಿದ್ದರು. ಅದನ್ನು ಸರ್ಕಾರ ಈ ವರ್ಷದ ಅಂತ್ಯದಲ್ಲಿ ಮಾರ್ಚ್ 31–2002 ರಲ್ಲಿ ನಾವು ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಇದುವರೆವಿಗೂ ಈ ರಾಜ್ಯದಲ್ಲಿ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಅಪಾಯಿಂಟ್ ಆದವರ ಸಂಖ್ಯೆ: ಕೇವಲ 6000 ಮಾತ್ರ. ಅದಕ್ಕಿಂತಲೂ ಹೆಚ್ಚಿಗೆ ಅಪಾಯಿಂಟ್ ಮಾಡಲಿಕ್ಕೆ ಸರ್ಕಾರದಿಂದ ಸಾಧ್ಯವಾಗಿಲ್ಲ. ಈ ಸದನದಲ್ಲಿ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು ಇದ್ದಾರೆ, ನಾನು ಅವರಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಬ್ಯಾಕ್‌ಲಾಗ್ ಹುದ್ದೆಯನ್ನು ಅಪಾಯಿಂಟ್ ಮಾಡುವುದರ ಬಗ್ಗೆ ಒಂದು ನ್ಯೂನ್ಯತೆ ಇದೆ. ಏನಾಗಿದೆ ಎಂದರೆ ಪ್ರತಿ ಇಲಾಖೆಯಲ್ಲಿಯೂ ಪ್ರತ್ಯೇಕವಾಗಿ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ನೋಟಿಫಿಕೇಷನ್ ಮಾಡುತ್ತಾರೆ. ಏನು ಮೆರಿಟ್‌ನಲ್ಲಿರುವಂತಹ ಸ್ಟೂಡೆಂಟ್ಸ್ ಇದ್ದಾರೆ, ಅನ್ ಎಂಪ್ಲಾಯ್‌ಮೆಂಟ್ಸ್ ಯೂಥ್ಸ್ ಇದ್ದಾರೆ ಅವರುಗಳು ಎಲ್ಲಾ ಇಲಾಖೆಗಳಲ್ಲೂ ಕೂಡ ಅರ್ಜಿ ಹಾಕುತ್ತಾರೆ. ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಮೆರಿಟ್‌ನಲ್ಲಿರುವಂತಹ ನೂರಾರು ಜನರು ಎಲ್ಲಾ ಇಲಾಖೆಗಳಲ್ಲೂ ನೇಮಕವಾಗುತ್ತಾರೆ. ಇದರಿಂದಾಗಿ ಬ್ಯಾಕ್‌ಲಾಗ್ ಹುದ್ದೆ ಭರ್ತಿಯಾಗುವುದಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ನಾನು ಸರ್ಕಾರದವರಲ್ಲಿ ಸಲಹೆಯನ್ನು ಮಾಡುತ್ತೇನೆ, ಇವತ್ತು ಡೈರೆಕ್ಟರೇಟ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಅವರುಗಳು ಏನೂ ಕೆಲಸವಿಲ್ಲದೆ ನೊಣ ಹೊಡೆದುಕೊಂಡು ಕುಳಿತ್ತಿದ್ದಾರೆ. ಅವರಿಗೆ ಕೆಲಸ ಹಚ್ಚಿ ಎಲ್ಲಾ ಇಲಾಖೆಗಳಿಂದ ಖಾಲಿ ಇರತಕ್ಕಂಥ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ವಿವರ ತರಿಸಿ ಕ್ರೋಢೀಕರಿಸಿ ಒಂದು ಕಾಮನ್ ನೋಟಿಫಿಕೇಷನ್ ಮಾಡಿ ಇಡೀ ರಾಜ್ಯದಲ್ಲಿರತಕ್ಕಂಥ ಎಲ್ಲಾ ಪರಿಶಿಷ್ಟ ಜಾತಿ: ಪಂಗಡದ ಜನಾಂಗದವರು ಅಪ್ಲಿಕೇಷನ್ನನ್ನು ಆ ಡೈರೆಕ್ಟರ್‌ರವರ ಹತ್ತಿರ ಹಾಕಿಕೊಳ್ಳಲಿ. ಅವೆಲ್ಲವನ್ನೂ ಕ್ರೋಢೀಕರಿಸಿ ಒಂದು ಮೆರಿಟ್ ಲಿಸ್ಟ್ ಮಾಡಿ ಏಕ ಕಾಲದಲ್ಲಿ ಈ ರಾಜ್ಯದಲ್ಲಿರತಕ್ಕಂಥ ಎಲ್ಲಾ ಇಲಾಖೆಗಳಿಗೆ ನೇಮಕ ಆದರೆ ಈ ಪ್ರೋಸೆಸ್‌ಗೆ ಒಂದು ಅರ್ಥ ಬರುತ್ತದೆ. ನಿರುದ್ಯೋಗಿ ಬಡವರು ಪರಿಶಿಷ್ಟ ಜಾತಿ, ಜನಾಂಗದವರು ಏನು ಅಲೆಯುತ್ತಿದ್ದಾರೆ, ಅವರಿಗೆ ಉದ್ಯೋಗ ಕೊಟ್ಟ ಹಾಗೆ ಆಗುತ್ತದೆ. ಆ ಪುಣ್ಯ ನಿಮ್ಮ ಸರ್ಕಾರಕ್ಕೇ ಬರುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಬಹಳ ಉತ್ತಮವಾದಂಥ ಕೆಲಸವನ್ನು ಮಾಡಿದ್ದಾರೆ. ನಾನು ವಿರೋಧಪಕ್ಷದವನಾಗಿ ಬರೇ ಅವರನ್ನು ಟೀಕೆ ಮಾಡುವುದಿಲ್ಲ. ಕೆರೆಕಟ್ಟೆಗಳನ್ನು ಇವತ್ತು ಒತ್ತುವರಿ ಮಾಡಿರತಕ್ಕವರನ್ನು ತೆರವು ಗೊಳಿಸುತ್ತೇವೆ, ಕೆರೆಕಟ್ಟೆಗಳನ್ನು ಇವತ್ತು ನಾವು ಹೆಚ್ಚು ನೀರು ಸಂಗ್ರಹ ಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತೇವೆ ಎಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅದಕ್ಕೆ ಕನಿಷ್ಟ ಪಕ್ಷ ಐದಾರು ಕೋಟಿ ರೂ. ಯಾದರೂ ಈ ಸಂದರ್ಭದಲ್ಲಿ ಬಜೆಟ್‌ನಲ್ಲಿ ಹಣವನ್ನು ಒದಗಿಸಬೇಕಲ್ಲಾ? ಆ ಕೆಲಸವನ್ನು ಸರ್ಕಾರ ಮಾಡಿಲ್ಲ. ಆದ್ದರಿಂದ ನಾನು ಒತ್ತಾಯ ಮಾಡುವುದೇನೆಂದರೆ ಕೆರೆಕಟ್ಟೆಗಳ ಒತ್ತುವರಿಗೆ ಈ ವರ್ಷ ಪ್ರಾರಂಭಿಕವಾಗಿ ಐದು ತಿಂಗಳಲ್ಲಿ ಐದಾರು

ಕೋಟಿ ರೂಪಾಯಿಗಳಾದರೂ ಒದಗಿಸಬೇಕು. ಇನ್ನು, ಎ.ಡಿ.ಬಿ. ಪ್ರಾಜೆಕ್ಟ್‌ನಲ್ಲಿ ಕರಾವಳಿ ಪ್ರದೇಶದಲ್ಲಿ ಬರತಕ್ಕಂಥ ಸುಮಾರು ಹತ್ತು ಪಟ್ಟಣಗಳ ಅಭಿವೃದ್ಧಿಗೆ 150 ಕೋಟಿ ರೂಪಾಯಿಗಳ ಯೋಜನೆಯನ್ನು ತಾವು ಮಾಡಿದ್ದೀರಿ. ಅದೇರೀತಿಯಾಗಿ ಹಳೆಯ ಮೈಸೂರಿನಲ್ಲಿ ದಕ್ಷಿಣ ಕರ್ನಾಟಕದಲ್ಲಿ ಬರತಕ್ಕಂಥ ಪಟ್ಟಣಗಳ ಅಭಿವೃದ್ಧಿಗೆ ತಾವು 60 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಸ್ವಾಮಿ, ಅವು ಯಾವುವು ಎಂದರೆ ತುಮಕೂರು, ರಾಮನಗರ, ಚೆನ್ನಪಟ್ಟಣ, ಮೈಸೂರು, ಮದ್ದೂರು ಮತ್ತು ಮಂಡ್ಯ. 60 ಕೋಟಿ ರೂಪಾಯಿಗಳಲ್ಲಿ ಈ ....

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ಅದು ಹಳೆಯದು.

ಶ್ರೀ ಗೋವಿಂದ ಎಂ. ಕಾರಜೋಳ : ಹಳೆಯದು ಇರಲಿ. ನನ್ನದೊಂದು ವಿನಂತಿ ಇದೆ. ಏಕೆಂದರೆ ಹಿಂದಿನದ್ದು ಬೆಂಗಳೂರು ಮತ್ತು ಈ ಐದಾರು ಪಟ್ಟಣಗಳು, ಅಷ್ಟಕ್ಕೇ ಎಸ್.ಎಂ.ಕೃಷ್ಣ ಅವರು ಸೀಮಿತನಾಗಿದ್ದರು. ಅದಕ್ಕೇ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ನೀವು ಪ್ರಾದೇಶಿಕ ಸಮಾನತೆಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೀರಿ. ಉತ್ತರ ಕರ್ನಾಟಕದ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದ್ದೀರಿ ಮತ್ತು 60 ಕೋಟಿ ರೂಪಾಯಿಗಳ ಯೋಜನೆಯನ್ನು ಈ ಆರು ಪಟ್ಟಣಗಳಿಗೆ ಮಾಡಿದ್ದೀರಿ. ಆದರೆ ಉತ್ತರ ಕರ್ನಾಟಕದ ಒಂದೆರಡು ಪಟ್ಟಣಗಳಾದರೂ ಇದರಲ್ಲಿ ಸೇರಬೇಕಿತ್ತಲ್ಲಾ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಎ.ಡಿ.ಬಿ. ಪ್ರೋಗ್ರಾಮ್ ಸ್ಯಾಂಕ್ಷನ್ ಆದಾಗ ನೀವು ಇಲ್ಲಿ ಶಾಸಕರಾಗಿದ್ದಿರಿ. ಇದು ಜನತಾದಳ ಸರ್ಕಾರ ಇದ್ದಾಗ ಆಗಿದ್ದು.

ಶ್ರೀ ಗೋವಿಂದ ಎಂ. ಕಾರಜೋಳ : ಒಂದು ನಿಮಿಷ. ನಾನು ಜನತಾದಳ ಅಂತ ಹೇಳಲಿಲ್ಲ. ಸರ್ಕಾರ ಎಂದು ನಾನು ಹೇಳುತ್ತಿದ್ದೇನೆ. ಸರ್ಕಾರ ನಿರಂತರವಾಗಿ ಇರುತ್ತದೆ. ಮಾನ್ಯ ಹೆಗ್ಗಡೆಯವರೇ, ನಾನು ಸರ್ಕಾರ ಎಂದು ಹೇಳುತ್ತಿದ್ದೇನೆ. ಇವತ್ತು ಉಪ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರ ಜೊತೆಯಲ್ಲಿ ನಾವು ಇದ್ದೇವೆ. ನಾವೆಲ್ಲಾ ಅವರ ಬೆಂಬಲಿಗರು..

ಶ್ರೀ ಸಿದ್ಧರಾಮಯ್ಯ : ಇದು ಮೈಸೂರು, ರಾಮನಗರ, ಚನ್ನಪಟ್ಟಣ, ತುಮಕೂರು ಅಂತ ಇದೆಯಲ್ಲಾ, ಈ ಕಾರ್ಯಕ್ರಮ ಹೊಸದಲ್ಲ. ಎ.ಡಿ.ಬಿ. ಅಸಿಸ್ಟೆನ್ಸ್ ಪ್ರೋಗ್ರಾಮ್‌ನ್ನು ಮಾಡಿದಂಥಾದ್ದು 1998–99ರಲ್ಲಿ, ಆ ಕಾಲದಲ್ಲಿ ಪ್ರಾರಂಭವಾದಂಥ ಕಾರ್ಯಕ್ರಮ ಇದು. ಆಗ ನೀವೆಲ್ಲಾ ಶಾಸಕರಾಗಿದ್ದಿರಿ, ನಾನೂ ಕೂಡ ಶಾಸಕನಾಗಿದ್ದೆ. ಇದು ಕೃಷ್ಣ ಅವರ ಸರ್ಕಾರದ್ದಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಕೃಷ್ಣ ಅವರ ಸರ್ಕಾರ ಅಂತ ಹೇಳಲಿಲ್ಲ. ಶ್ರೀ ಕೃಷ್ಣ ಅವರು ಯಾವರೀತಿ ಪ್ರಾಜೆಕ್ಟ್‌ನ್ನು ಮಾಡಿದ್ದರು ಅದೇರೀತಿ...

ಶ್ರೀ ಡಿ.ಆರ್. ಪಾಟೀಲ್ : ತಾವು ಯೀಲ್ಡ್ ಆದರೆ ಒಂದು ನಿಮಿಷ. ಆವಾಗ ದಕ್ಷಿಣ ಕರ್ನಾಟಕದ ಪಟ್ಟಣಗಳಿಗೆ ಏನು ಬೆಳವಣಿಗೆ ಆಯಿತು; ಅದೇ ಉತ್ತರ ಕರ್ನಾಟಕದ 2 ನಗರಗಳಿಗೆ ಶ್ರೀ ಕೃಷ್ಣ ಸರ್ಕಾರ ಇದ್ದಾಗ ಒಂದು ಎ.ಡಿ.ಬಿ. ಪ್ರಪೋಸಲ್‌ನ್ನು ಕೊಟ್ಟಿದ್ದರು. ಅದು in principle sanction ಕೂಡ ಮಾಡಿದ್ದಾರೆ. ಅದೇನೂ ನೀವು ರೆಫರೆನ್ಸ್ ಮಾಡುವುದು ಬೇಡ. You must appreciate.

ಅಧ್ಯಕ್ಷರು : ಕಾರಜೋಳರವರೇ, ಬೇಗ ಮುಗಿಸಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಇನ್ನು ನಾನು ಕೆ.ಪಿ.ಟಿ.ಸಿ.ಎಲ್. ವಿಷಯಕ್ಕೆ ಬರುತ್ತೇನೆ. ಇವತ್ತು ರಾಜ್ಯದಲ್ಲಿ ಏನಾಗಿದೆ ಎಂದರೆ ವಿದ್ಯುತ್ ನಿಗಮಗಳು ಅಂತ ಏನಿವೆ, ಅವು ಹಾನಿಯಲ್ಲಿವೆ ಎನ್ನತಕ್ಕದ್ದನ್ನು ನಾವು ದಿನನಿತ್ಯ ಪತ್ರಿಕೆಗಳಲ್ಲಿ ಓದುತ್ತೇವೆ. ಆ ಸಂಸ್ಥೆಗೆ ಹಣ ಇಲ್ಲ, ಅವು ತೊಂದರೆಯಲ್ಲಿವೆ. ಮಾನ್ಯ ಅಧ್ಯಕ್ಷರೇ, ಇವತ್ತು ಏನಾಗಿದೆ ಎಂದರೆ, ರಾಜ್ಯದಲ್ಲಿ ಸರಾಸರಿ 80 ಮಿಲಿಯನ್ ಯೂನಿಟ್‌ಗಳಷ್ಟು ನಾವು ಪ್ರತಿನಿತ್ಯ ವಿದ್ಯುತ್ ಬಳಕೆಯನ್ನು ಮಾಡುತ್ತಿದ್ದೇವೆ. ಇವತ್ತು ಕೆ.ಇ.ಬಿ.ಯಲ್ಲಿ ಸುಮಾರು 30–32 ಪರ್ಸೆಂಟ್ ಈ ಟ್ರಾನ್ಸಮಿಶನ್ ಲಾಸ್ ಆಗುತ್ತಿದೆ ಎಂದು ಹೇಳುತ್ತಾರೆ. ಅದರಿಂದ 22 ರಿಂದ 25 ಮಿಲಿಯನ್ ಯೂನಿಟ್‌ಗಳಷ್ಟು ಪ್ರತಿನಿತ್ಯ ಲಾಸ್ ಆಗುತ್ತಿದೆ. ಅದರಿಂದ ಏನಾಗಿದೆ ಎಂದರೆ ಕೆ.ಇ.ಬಿ.ಗೆ. ಪ್ರತಿನಿತ್ಯ ಸುಮಾರು 6 ರಿಂದ 7 ಕೋಟಿ ರೂಪಾಯಿಗಳಷ್ಟು ಹಾನಿಯಾಗುತ್ತಿದೆ. ಈ ಹಾನಿಯ ಸರಾಸರಿ ಮೊತ್ತ ಒಂದು ವರ್ಷಕ್ಕೆ ಲೆಕ್ಕಹಾಕಿದಾಗ ಸುಮಾರು 2200 ಕೋಟಿ ರೂ. ಗಿಂತಲೂ ಹೆಚ್ಚಾಗುತ್ತದೆ. ಇದು 2200 ಕೋಟಿ ರೂ. ಗಿಂತಲೂ ಹೆಚ್ಚು. ಮಾನ್ಯ ಅಧ್ಯಕ್ಷರೇ, ಈ ಕೆ.ಇ.ಬಿ. ಸಂಸ್ಥೆಯಿಂದ ಹಾನಿಯಾಗುತ್ತದೆ ಎಂದು ಹೇಳುತ್ತೇವೆ. ಈ ಟ್ರಾನ್ಸಮಿಶನ್ ಲಾಸ್‌ಗೆ ಕಾರಣ ಏನು? ಮೂವತ್ತು–ನಲ್ವತ್ತು ವರ್ಷಗಳಷ್ಟು ಹಿಂದಿ ಹಾಕಿದ್ದಂಥ ಕೆ.ಇ.ಬಿ. ಲೈನ್‌ಗಳು, 440 ವೋಲ್ಟೇಜ್ ಎಲ್.ಟಿ.ಲೈನಗಳು, 11ಕೆ.ವಿ.ಎ. ಲೈನ್‌ಗಳಿವೆಯಲ್ಲ ಇವೆಲ್ಲ ಹಳೆಯದಾಗಿವೆ. ಆಗ ಹಾಕಿದ್ದಂಥ ಕಂಡಕ್ಟರ್ಸ್‌ಗಳೆಲ್ಲಾ ಹರಿದು ಜೋತಾಡುತ್ತಿವೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೇಂದ್ರ ಸರ್ಕಾರದ ನೆರವಿನಿಂದ ಕೇಂದ್ರ ಸರ್ಕಾರದಿಂದ ಶೇಕಡಾ ಐವತ್ತರಷ್ಟು ಮತ್ತು ರಾಜ್ಯ ಸರ್ಕಾರದಿಂದ ಶೇಕಡಾ ಐವತ್ತರಷ್ಟು ಹಾಕಿ ಈಗೇನು ಪಟ್ಟಣ ಪ್ರದೇಶಗಳ ಪ್ಯಾಕೇಜ್‌ನ್ನು ನೀವು ಎ.ಪಿ.ಡಿ.ಆರ್.ಪಿ.ಯಲ್ಲಿ ಮಾಡಿದ್ದೀರಿ, ಅದೇರೀತಿ ರೂರಲ್ ಪ್ಯಾಕೇಜ್ ಮಾಡಿದರೆ ಉತ್ತಮವಾಗುತ್ತದೆ. ಏನು ಪ್ರತಿವರ್ಷ ಕೆ.ಇ.ಬಿ.ಗೆ ಸುಮಾರು 2200 ಕೋಟಿ ರೂ. ನಷ್ಟವಾಗುತ್ತಿದೆ, ಅದನ್ನು ನಾವು ಹೀಗೆ ಮಾಡುವುದರಿಂದ ತಡೆಯಬಹುದು. ಒಂದುವೇಳೆ ನಾವು ಇದನ್ನು ಮಾಡಿದ್ದೇ ಆದರೆ ಕೆ.ಪಿ.ಟಿ.ಸಿ.ಎಲ್.ದ್ದು ಏನು ಆರ್ಥಿಕ ತೊಂದರೆ ಇದೆ, ಅದರ ನಿವಾರಣೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಅವರು ಬರೇ ಅಂಕಿಸಂಖ್ಯೆಗಳನ್ನು ಹೇಳಿ 30 ರಿಂದ 32 ಪರ್ಸೆಂಟ್ ಟ್ರಾನ್ಸಮಿಶನ್ ಲಾಸ್ ಎಂದರೆ ಅದನ್ನು ನಾನು ಒಪ್ಪುವುದಿಲ್ಲ. ಇವತ್ತು ಕೆ.ಇ.ಬಿ.ಯಲ್ಲಿ ಏನಾಗಿದೆ ಎಂದರೆ, ವಿದ್ಯುತ್ ಕಳ್ಳರು ಯಾರು ಎಂದರೆ, ಯಾರು ಇಲಾಖೆಯ ನೌಕರರಿದ್ದಾರೆ, ಶೇಕಡಾ 80ರಷ್ಟು ಜನ ವಿದ್ಯುತ್ ಕಳ್ಳತನ ಮಾಡುತ್ತಿದ್ದಾರೆ. ಒಬ್ಬ ಕೆ.ಇ.ಬಿ. ಲೈನ್‌ಮನ್ ಇದ್ದವನು ಈ ಭೂಮಿಮೇಲೆ ಅಂಗೈಯಗಲದಷ್ಟು ಹೊಲ ಇರಲಾರದವನು ಬೆಲ್ಲದ ಅಡತಿ ಅಂಗಡಿಗಳಿಗೆ 300–400 ಪೆಂಟಿ ಪ್ರತಿವರ್ಷ ಬೆಲ್ಲ ಕಳಿಸುತ್ತಾನೆ. ಅವರು ಒಕ್ಕಲುತನವನ್ನೇ ಮಾಡುವುದಿಲ್ಲ. ಅವರಿಗೆ ಹೊಲಾನೇ ಇಲ್ಲ. ಅಂದಮೇಲೆ ಅವರು ಯಾವ ರೀತಿ ಕಳ್ಳತನ ಮಾಡುತ್ತಾರೆಂಬುದನ್ನು ತಾವು ನೋಡಬಹುದು. ಇವತ್ತು ಕಳ್ಳತನದಿಂದ ಅವರು ವಿದ್ಯುತ್ ಕೊಡುತ್ತಾರೆ, ಕಾರ್ಖಾನೆಗಳಿಗೆ ಕಳ್ಳತನದಿಂದ ವಿದ್ಯುತ್ ಕೊಡುತ್ತಾರೆ, ಫ್ಲೋರ್‌ಮಿಲ್‌ಗಳಿಗೆ ಕಳ್ಳತನದಿಂದ ವಿದ್ಯುತ್ ಕೊಡುತ್ತಾರೆ. ಈ ಸೋರಿಕೆಯಲ್ಲಿ ಏನು 2200 ಕೋಟಿ ರೂ. ಇದೆ. ಅದರಲ್ಲಿ ಸುಮಾರು 1500 ಕೋಟಿ ರೂಪಾಯಿ ಇಲಾಖೆಯ ಅಧಿಕಾರಿಗಳಿಂದಲೇ ಸೋರಿಕೆಯಾಗುತ್ತಿದೆ. ಇದು ನೌಕರರು ಮತ್ತು ಅಧಿಕಾರಿಗಳು ಸೇರಿ ಮಾಡುವಂಥಾದ್ದು. ಇದನ್ನು ತಡೆಗಟ್ಟಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಯಾವನೋ

ಒಬ್ಬ ಬಡರೈತ ತಪ್ಪಿ ಹುಕ್ ಹಾಕಿ ಕರೆಂಟ್ ತೆಗೆದುಕೊಂಡಿದ್ದಾನೆ ಎಂದರೆ 80 ಸಾವಿರ ರೂ. 90 ಸಾವಿರ ರೂ, ಒಂದು ಲಕ್ಷ ರೂಪಾಯಿ ದಂಡ ಹಾಕುತ್ತೀರಿ. ಆದರೆ ಇವರಿಗೇನು ಮಾಡುತ್ತೀರಿ? ಇವರಿಗೆ ನೀವು ರಾಜ್ಯದಲ್ಲಿ ಯಾವ ನೌಕರರಿಗೂ ಇರಲಾರದಷ್ಟು ಸಂಬಳವನ್ನು ಕೊಡುತ್ತಿದ್ದೀರಿ. ಒಬ್ಬ ಕೆ.ಇ.ಬಿ.ಯಲ್ಲಿ ಕಡೆಯ ಮನುಷ್ಯ ಯಾರು ಲೈನ್‌ಮನ್ ಇರುತ್ತಾನೆ, ಅವರು ಇವತ್ತು ಇನ್‌ಕಮ್ ಟ್ಯಾಕ್ಸ್ ಕೊಡುತ್ತಾನೆ. ನೀವು ನಾವು ಇನ್‌ಕಮ್ ಟ್ಯಾಕ್ಸ್ ಕೊಡುವುದಿಲ್ಲ. ಅಷ್ಟೊಂದು ಸಂಬಳ ಕೆ.ಇ.ಬಿ. ನೌಕರರಿಗೆ ಇದೆ. ಇಲ್ಲಿಯ ಲೈನ್‌ಮನ್‌ಗೆ ಇನ್‌ಕಮ್ ಟ್ಯಾಕ್ಸ್ ಕಟ್ಟುವಂಥ ಸಂಬಳ ಎಂದರೆ 17 ರಿಂದ 20 ಸಾವಿರದಷ್ಟು ಸಂಬಳವನ್ನು ಕೊಡುತ್ತಿದ್ದೀರಿ. ಜತೆಗೆ ಅವರಿಗೆ ಪುಕ್ಕಟೆ ವಿದ್ಯುತ್ ಕೊಡುತ್ತೀರಿ. ಮೇಲಾಗಿ ಈ ರಾಜ್ಯದಲ್ಲಿ ಇರತಕ್ಕಂಥ ವಿದ್ಯುತ್‌ನ್ನು ಮಾರಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದರ ಬಗ್ಗೆ ತಾವು ಏನು ಚಿಂತನೆ ಮಾಡುತ್ತೀರಿ? ಅವರನ್ನು ಯಾವರೀತಿ ಕಂಟ್ರೋಲ್ ಮಾಡುತ್ತೀರೆಂದು ದಯವಿಟ್ಟು ತಾವು ಸದನಕ್ಕೆ ತಿಳಿಸಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ನಾನು ಇವತ್ತು ಸರ್ಕಾರಕ್ಕೆ ಒಂದು ಸಲಹೆಯನ್ನು ಮಾಡುತ್ತೇನೆ. ಇವತ್ತು ಏನು ರೈತರಿಗೆಂದು ಇನ್ನೂರು ಕಿಲೋವ್ಯಾಟ್ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿದ್ದೀರಿ, 63ರದ್ದು ಹಾಕಿದ್ದೀರಿ, ನೂರರದ್ದು ಹಾಕಿದ್ದೀರಿ. ಇದರಿಂದ ಏನಾಗುತ್ತದೆ ಎಂದರೆ ಟ್ರಾನ್ಸ್‌ಫಾರ್ಮರ್ ಸುಟ್ಟರೆ ಇಡೀ ಆ ಪ್ರದೇಶದಲ್ಲಿ ಬರತಕ್ಕಂಥ ಎಲ್ಲಾ ರೈತರಿಗೂ ತೊಂದರೆಯಾಗುತ್ತದೆ. ಅದಕ್ಕಾಗಿ 25 ಕಿಲೋವ್ಯಾಟ್ ಟ್ರಾನ್ಸ್‌ಫಾರ್ಮರ್‌ಗಳನ್ನು ಎಲ್ಲಾ ಕಡೆಗೂ ಹಾಕಿದರೆ ಅದು ಸುಟ್ಟರೆ ಕಡಿಮೆ ಜನರಿಗೆ ತೊಂದರೆಯಾಗುತ್ತದೆ. ಕೇವಲ ನಾಲ್ಕು-ಆರು ಜನರಿಗಷ್ಟೇ ಇದರಿಂದ ತೊಂದರೆಯಾಗುತ್ತದೆ. ಅದಕ್ಕಾಗಿ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಷಯವನ್ನು ನಾನು ಸರ್ಕಾರದ ಗಮನ ಸೆಳೆಯಬಯಸುತ್ತೇನೆ. ಮಾನ್ಯ ಹಣಕಾಸು ಸಚಿವರು ಹಿಂದೆ ಕೂಡ ಬಹಳ ಸಮರ್ಥವಾಗಿ ಈ ರಾಜ್ಯದ ಹಣಕಾಸು ವ್ಯವಸ್ಥೆಯನ್ನು ನಿಭಾಯಿಸಿದವರು. ಅವರನ್ನು ನಾನು ವಿನಂತಿ ಮಾಡುತ್ತೇನೆ. ಕೆ.ಪಿ.ಟಿ.ಸಿ.ಎಲ್.ನಲ್ಲಿ ಓ.ವೈ.ಟಿ. ಸ್ಕೀಮ್ ಅಂತ (own your Transformer) ಏನು ತಂದಿದ್ದೀರಿ, ಇದನ್ನು ಕೂಡಲೇ ರದ್ದು ಮಾಡಬೇಕು. ಏಕೆಂದರೆ ಈ ಯೋಜನೆಯಲ್ಲಿ ಟ್ರಾನ್ಸ್‌ಫಾರ್ಮರ್‌ನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ಇದಕ್ಕೆ ಸುಮಾರು ಇಪ್ಪತ್ತೈದು ಸಾವಿರ ರೂಪಾಯಿಗಳಲ್ಲದೆ ಕಂಬಕ್ಕೆ ಬೇರೆ ರೊಕ್ಕ ಕೊಡಬೇಕು, ಫ್ಯೂಸ್‌ಗೆ ಬೇರೆ ರೊಕ್ಕ ಕೊಡಬೇಕು, ಹಡ್ಡೆ ಹಾಕಲಿಕ್ಕೆ ಬೇರೆ ಕೊಡಬೇಕು. ಇದೆಲ್ಲಾ ಸೇರಿದರೆ ಸುಮಾರು ನಲ್ವತ್ತು ಸಾವಿರ ರೂಪಾಯಿ ಆಗುತ್ತದೆ. ದಯಮಾಡಿ ರೈತರ ಮೇಲಿನ ಈ ಹೊರೆಯನ್ನು ತೆಗೆಯಿರಿ. ಏಕೆಂದರೆ ಅವರು...

ಮಾನ್ಯ ಸದಸ್ಯರು : ಅದು ಕಡ್ಡಾಯವೇನೂ ಅಲ್ಲ. ದುಡ್ಡಿದ್ದವರು ಬೇಕಾದರೆ ಹಾಕಿಸಿಕೊಳ್ಳುತ್ತಾರೆ.

ಗೊಂದಲ

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಯಾರಿಗೂ ಯೀಲ್ಡ್ ಆಗುವುದಿಲ್ಲ. ಉತ್ತರ ಹೇಳುವ ಕಾಲದಲ್ಲಿ ಅವರು ಏನು ಹೇಳುತ್ತಾರೆ ಹೇಳಲಿ. ದಯವಿಟ್ಟು ತಾವು ರೈತವರ್ಗದಿಂದ ಬಂದವರು. ಬೆಳೆವಿಮೆ ಬಗ್ಗೆ ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ವರ್ಷ-ಸುಮಾರು 241 ಕೋಟಿ ರೂಪಾಯಿಗಳನ್ನು ತಾವು ಇಟ್ಟಿದ್ದೀರಿ. ನಾವು ಬೆಳೆ ವಿಮೆ ಮಾಡುವುದು ಎಷ್ಟು? ಕರೀಫ್‌ಗೆ 931 ಕೋಟಿ ರೂಪಾಯಿಗಳು ಮತ್ತು ರಬಿಗೆ 350 ಕೋಟಿ ರೂಪಾಯಿಗಳನ್ನು ಮಾಡಿದ್ದೇವೆ. ಸರಾಸರಿ

ಇವತ್ತು ಶೇಕಡಾ ಐವತ್ತರಷ್ಟು ಮಳೆ ಇಲ್ಲದ್ದಕ್ಕಾಗಿ ಬೆಳೆ ವಿಫಲವಾಗುತ್ತಿದೆ. ನಾವು ರೈತರಿಗೆ ಸುಮಾರು ಶೇಕಡಾ 50ರಷ್ಟು ಆದರೂ ಬೆಳೆ ವಿಮೆ ಪರಿಹಾರವನ್ನು ಕೊಡಬೇಕಾಗುತ್ತದೆ.

10.40 ಎ ಎಂ

ಕನಿಷ್ಟ 740 ಕೋಟಿ ರೂಪಾಯಿಗಳಾದರೂ ಬೇಕಾಗುತ್ತದೆ. ಅದರಲ್ಲಿ ಕೇಂದ್ರದ ಪಾಲು ಅರ್ಧವಾದರೂ, ಉಳಿದರ್ಧವನ್ನು ನಮ್ಮ ಸರ್ಕಾರ ಕೊಡಬೇಕಲ್ಲಾ. ಕನಿಷ್ಟ 350 ಕೋಟಿ ರೂ. ಯನ್ನಾದರೂ ನಮ್ಮ ಸರ್ಕಾರ ಕೊಡಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ಯೋಚನೆ ಮಾಡಿ. ರೈತರಿಗೆ ಪಕ್ಕಾಟೆಯಾಗಿ ಕೊಡತಕ್ಕಂಥಾದ್ದಿಲ್ಲ, ನೀವು ಅವರಿಂದ ವಿಮೆ ಮುರಿದುಕೊಂಡಿದ್ದೀರಿ. ಅವರಿಗೆ ತೊಂದರೆ ಮಾಡಬೇಡಿ. ಮತ್ತು ಕಳೆದ ವರ್ಷದ್ದೂ ಕೂಡ ಸುಮಾರು 30–35 ಕೋಟಿ ರೂ. ಬಾಕಿ ಇದೆ. ನಮ್ಮ ಭಾಗದಲ್ಲಿ ಈ ಬೆಳೆ ವಿಮೆ ಸಿಕ್ಕಿಲ್ಲ. ಯಾರು ಪ್ರಭಾವಿಗಳಿದ್ದಾರೋ ಅಂಥವರಿಗೆ ಮಾತ್ರ ಸಿಕ್ಕಿರಬಹುದು. ಉಳಿದವರಿಗೆ ಸಿಕ್ಕಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಬೆಳೆ ವಿಮೆಗೆ ಸುಮಾರು 350 ಕೋಟಿ ರೂ. ಯನ್ನಾದರೂ ಈ ಬಜೆಟ್‌ನಲ್ಲಿ ಒದಗಿಸಬೇಕು. ಇವತ್ತು ಸರ್ಕಾರದ ಒಂದೆರಡು ನಿಗಮಗಳು ಇವೆ. ತಾವು ಹೆಚ್ಚು ಸಮಯ ಕೊಡುವುದಿಲ್ಲವೆಂದು ಹೇಳಿದಿರಿ. ಅದಕ್ಕಾಗಿ ಸಂಕ್ಷಿಪ್ತವಾಗಿ ಹೇಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಪರಿಶಿಷ್ಟ ಜಾತಿ ಜನಾಂಗದವರ ನಿಗಮವೊಂದು ಇದೆ. ಆ ನಿಗಮದ ಸ್ಕಾಲರಿ ಮತ್ತು ಸಾದಿಲ್ವಾರು ವೆಚ್ಚ ಮತ್ತು ರೀಪೇಮೆಂಟ್ ಮಾಡತಕ್ಕಂಥಾದ್ದು ಪ್ರತಿ ವರ್ಷ 25 ಕೋಟಿ ರೂಪಾಯಿಗಳಾಗುತ್ತವೆ. ಸರ್ಕಾರ ಅದಕ್ಕೆ ಬಜೆಟ್ ಕೊಟ್ಟಿದೆ 26 ಕೋಟಿ ರೂಗಳು. ಅದಕ್ಕೆ ಸರಿಸಮಾನವಾದಂಥ ಬಜೆಟ್‌ನ್ನು ಕೊಟ್ಟರೆ ಆ ಕಾರ್ಪೊರೇಷನ್ ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಹರಿಜನರ ಗಿರಿಜನರ ಉದ್ಧಾರ ಯಾವರೀತಿ ಆಗುತ್ತದೆ? ಇದನ್ನು ತಾವು ವಿಚಾರ ಮಾಡಿ, ಮರು ಪರಿಶೀಲನೆ ಮಾಡಿ ಕನಿಷ್ಟ 50 ಕೋಟಿ ರೂ. ಯನ್ನಾದರೂ ತಾವು ಬಜೆಟ್ ಒದಗಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು 56 ವರ್ಷಗಳಾದವು. ರಾಜ್ಯದಲ್ಲಿ ಸುಮಾರು 24 ಲಕ್ಷ ಪರಿಶಿಷ್ಟ ಜಾತಿ ಜನಾಂಗದವರ ಕುಟುಂಬಗಳು ಇವೆ. ಈ 56 ವರ್ಷದೊಳಗೆ ಪರಿಶಿಷ್ಟ ಜಾತಿ ಜನಾಂಗದ ಕುಟುಂಬಗಳಿಗೆ ಸರ್ಕಾರ ಸಹಾಯ ಮಾಡಿದ್ದು ಎಷ್ಟೆಂದರೆ 6 ಲಕ್ಷ ಕುಟುಂಬಗಳಿಗೆ ಮಾತ್ರ. ಇನ್ನೂ 18 ಲಕ್ಷ ಕುಟುಂಬಗಳಿಗೆ ಸರ್ಕಾರದಿಂದ ಯಾವುದೇ ಒಂದು ರೂಪಾಯಿ ಲಾಭ ಆಗಿಲ್ಲ. ಯಾವುದೇ ಒಂದು ಯೋಜನೆಯ ಲಾಭ ಅವರಿಗೆ ಸಿಕ್ಕಿಲ್ಲ. ಇನ್ನು 18 ಲಕ್ಷ ಜನ ಏನು ಬಡವರು ಇದ್ದಾರೆ, ಅವರಿಗೆ ನೀವು ಇದೇ ಪ್ರಮಾಣದಲ್ಲಿ ಬಜೆಟ್ ಒದಗಿಸುತ್ತಾ ಹೋದರೆ ಅವರಿಗೆ ಸಹಾಯ ಮಾಡಲಿಕ್ಕೆ ಸುಮಾರು ಎರಡುನೂರು ಮೂರು ನೂರು ವರ್ಷವಾದರೂ ಬೇಕಾಗಬಹುದು. ಅದಕ್ಕೆ, ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ತಾವು ಹಿಂದುಳಿದ ಪ್ರದೇಶದಿಂದ ಬಂದವರಿದ್ದೀರಿ. ಹಿಂದುಳಿದ ವರ್ಗದಿಂದ ಬಂದವರಿದ್ದೀರಿ. ದಯಮಾಡಿ 700–800 ಕೋಟಿ ರೂ. ಯಾದರೂ ಸರ್ಕಾರ ಕೊಡಬೇಕಲ್ಲಾ. ಈ ಜನಾಂಗದವರ ಅಭಿವೃದ್ಧಿಗೆ, ಈ ಜನಾಂಗದವರಿಗೆ ಇರತಕ್ಕ ಯೋಜನೆಗಳ ಅನುಷ್ಠಾನಗೊಳಿಸಲಿಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಇನ್ನು ಸರ್ಕಾರಕ್ಕೆ ಸೇರಿದ ಇನ್ನೊಂದು ನಿಗಮ ಇದೆ. ಅದು ಚರ್ಮ ಕೈಗಾರಿಕಾ ನಿಗಮ, ಲಿಡ್ಕರ್.

ಅಧ್ಯಕ್ಷರು : ದಯಮಾಡಿ ಬೇಗ ಮುಗಿಸಿ. 11 ಗಂಟೆಗೆ ಚರ್ಚೆ ಮುಗಿಸುತ್ತೇನೆ. ನೀವು ಬಿ.ಜೆ.ಪಿ. ಉಪ ನಾಯಕರಿದ್ದೀರಿ. 11 ಗಂಟೆಯವರೆಗೆ ನೀವೇ ಮಾತನಾಡಿ, ನಮ್ಮದೇನಿಲ್ಲ. 11 ಗಂಟೆಯಿಂದ ಮುಂದಕ್ಕೆ ಯಾವುದೇ ಕಾರಣಕ್ಕೂ ಚರ್ಚೆಯನ್ನು ಮುಂದುವರಿಸುವುದಿಲ್ಲ. ಚರ್ಚೆ ಮುಕ್ತಾಯವಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಸ್ವಲ್ಪ, ಸ್ವಲ್ಪ ಮಾತನಾಡುತ್ತಾ ಇದ್ದೇನೆ. ನನಗೊಂದು ಆರು ಗಂಟೆಯಾದರೂ ಕೊಡುತ್ತೀರಿ ಎಂದುಕೊಂಡಿದ್ದೆ. ಸಾರ್, ಇವತ್ತು ರಾತ್ರಿ ಎರಡು ಗಂಟೆಯಾದರೂ ಇದನ್ನು ಮುಗಿಸೇ ಹೋಗುತ್ತೇವೆ. 1976 ರಲ್ಲಿ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವನ್ನು ಸರ್ಕಾರ ಪ್ರಾರಂಭ ಮಾಡಿದೆ. ಅಂದಿನಿಂದ ಇಂದಿನವರೆಗೂ ಆ ಸಂಸ್ಥೆಯ ಸ್ಥಿತಿಗತಿ ಹೇಳಲಿಕ್ಕೆ ಸಾಧ್ಯವಿಲ್ಲ. ಇಲ್ಲಿರತಕ್ಕಂಥವರೆಲ್ಲರೂ ಪರಿಶಿಷ್ಟ ಜಾತಿ ಜನಾಂಗದವರು. ಆ ಎಂ.ಡಿ. ಪರಿಶಿಷ್ಟ ಜಾತಿ ಜನಾಂಗಕ್ಕೆ ಸೇರಿದವರು. ಅಲ್ಲಿ ಉದ್ಯೋಗ ಮಾಡತಕ್ಕಂಥವರು ಪರಿಶಿಷ್ಟ ಜಾತಿ ಜನಾಮಗಕ್ಕೆ ಸೇರಿದವರು. ಅದು ಇವತ್ತು ನಷ್ಟದಲ್ಲಿದ್ದು ಮುಳುಗುವಂಥ ಪರಿಸ್ಥಿತಿ ಬಂದಿದೆ. ಆ ಸಂಸ್ಥೆಯನ್ನು ಉಳಿಸಲಿಕ್ಕೆ ಕನಿಷ್ಟ ಪಕ್ಷ ಹದಿನೈದು ಕೋಟಿ ರೂ. ಯಾದರೂ ಸರ್ಕಾರ, ಬಜೆಟ್‌ನಲ್ಲಿ ಹಣ ಒದಗಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆ, ಇದರ ಬಗ್ಗೆ ಹೆಚ್ಚು ಗಮನಕೊಟ್ಟು ನೋಡಬೇಕೆಂದರೆ, ಸಮಾಜದಲ್ಲಿ ಕಟ್ಟ ಕಡೆಯ ಮನುಷ್ಯ ಚಮ್ಮಾರ ಎನ್ನತಕ್ಕಂಥವರು ಈ ಸಮಾಜದಲ್ಲಿ ಎಲ್ಲರಿಗಿಂತಲೂ ಕಟ್ಟಕಡೆಯ ಮನುಷ್ಯ, ಬಡವ. ಅವರ ಉದ್ಧಾರಕ್ಕಾಗಿ ಹದಿನೈದು ಕೋಟಿ ರೂಪಾಯಿಗಳನ್ನಾದರೂ ಸರ್ಕಾರ ಇಡಬೇಕಲ್ಲಾ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಕನಿಷ್ಟ ಪಕ್ಷ 15 ಕೋಟಿ ರೂ. ಯಾದರೂ ಒದಗಿಸಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಅಭಿವೃದ್ಧಿಗೆ, ತಾವು 54 ರಷ್ಟು ಯೋಜನಾ ಗಾತ್ರದಲ್ಲಿ ಕೊಟ್ಟಿದ್ದೇವೆಂದು ಹೇಳಿದಿರಿ. ಇದು ಕೇವಲ ಕಾಗದದಲ್ಲಿ ಮಾತ್ರ ಇದೆಯೆಂದು ಅನಿಸುತ್ತದೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನಮ್ಮ ಶಾಸಕರು ಕಾಗದ ಹಿಡಿದುಕೊಂಡು ಬರುತ್ತಲೇ ಇರುತ್ತಾರೆ. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಶಾಸಕರಿಗೆ ಯಾವುದಾದರೊಂದು ಗಂಟೆಯ ಕಾಲಾವಧಿ ನಿಗದಿ ಮಾಡಿದರೆ, ಈ ಹೌಸ್‌ನೊಳಗೆ ಬರುವುದು ತಪ್ಪುತ್ತೆ.

ಮಾನ್ಯ ಸದಸ್ಯರು : ಅದು ಮಾಡಲೇಬೇಕು ಸ್ವಾಮಿ. ಯಾವ ವಿಷಯವನ್ನೂ ಪ್ರಸ್ತಾಪ ಮಾಡಲಿಕ್ಕೆ ಆಗುತ್ತಲೇ ಇಲ್ಲ. ಇದಕ್ಕೆ ಒತ್ತು ಕೊಡದೇ ಹೋದರೆ ಕಷ್ಟವಾಗುತ್ತೆ ಮಾನ್ಯ ಸಭಾಧ್ಯಕ್ಷರೇ.

ಅಧ್ಯಕ್ಷರು : ಆದ್ದರಿಂದ, ಸಹಕರಿಸಬೇಕು. ಅವರೂ ಒಂದು ಅವಕಾಶ ಮಾಡಿ ಕೊಡಬೇಕು. ವಿಶೇಷವಾಗಿ ಶಾಸಕರಿಗೆ, ಅವರ ಮನವಿ ಸಲ್ಲಿಸುವುದಕ್ಕೆ ಅವಕಾಶ ಮಾಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ತಾವು ನನಗೆ ವಾರ್ನಿಂಗ್ ಮಾಡಿದಿರಿ. ಭ್ರಷ್ಟಾಚಾರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ, ಮುಗಿಸಿಬಿಡುತ್ತೇನೆ.

ಮಾನ್ಯ ಸದಸ್ಯರು : ವಿರೋಧಪಕ್ಷದ ಉಪ ನಾಯಕರು ನಮ್ಮ ವಿಷಯವನ್ನೂ ಸೇರಿಸಿ ಎಲ್ಲಾ ಹೇಳಿಬಿಟ್ಟರೆ ನಾವು ಮಾತನಾಡುವುದಿಲ್ಲ ಸ್ವಾಮಿ. ಮುಖ್ಯವಾಗಿ ಶಾಸಕರ ನಿಧಿಯನ್ನು ನೀವು ನಿರ್ಮಾಣ ಮಾಡದೇ ಇದ್ದರೆ, ನಾವು ಊರಿಗೆ ಹೋಗುವುದಕ್ಕಾಗುವುದಿಲ್ಲ. ಆ ವಿಷಯ

ಮಾಡಬೇಕಾಗುತ್ತದೆ. ಕುಡಿಯುವ ನೀರಿನ ವಿಚಾರದಲ್ಲಿ ಊರುಗಳಲ್ಲಿ ಮತ್ತು ರೈತರಿಗೆ ಬೇಕಾದ ಟ್ರಾನ್ಸ್‌ಫಾರ್ಮರ್ ಮೇಲಿನ ತೆರಿಗೆಯನ್ನು ತೆಗೆದು ಹಾಕಿ. ಇದನ್ನು ನೀವೇ ಹೇಳಿಬಿಡಿ, ನಾವು ಮಾತನಾಡುವುದೇ ಇಲ್ಲ. ನಾವು ಹೊಸ ಶಾಸಕರಾಗಿ ಇವತ್ತು ನಾವು ಒಂದು ಕೊಳವೆ ಬಾವಿ ತೆಗೆಸುವುದಕ್ಕಾಗುತ್ತಾ ಇಲ್ಲ. ಪರಿಸ್ಥಿತಿ ಆ ತರಹ ಆಗಿದೆ.

ಗೊಂದಲ

ಅಧ್ಯಕ್ಷರು : ದಯಮಾಡಿ, ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ. ಎಲ್ಲರೂ ಸಹಕರಿಸಿ, ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಗೆಳೆಯರೊಬ್ಬರು ವಿಜಾಪುರದಲ್ಲಿ ಮನೆ ಕಟ್ಟಿಸಲಿಕ್ಕೆ ಮಕ್ರಾನದಿಂದ ಮಾರ್ಬಲ್ ತರಿಸಿದರು. ಮಾರ್ಬಲ್ ತರಿಸಬೇಕಾದರೆ, ಅವರು ಟ್ರಾನ್ಸ್‌ಪೋರ್ಟ್ ಕಂಪನಿಯಿಂದ ಬಾಡಿಗೆ ಲಾರಿ ಹೇಳಿದರಂತೆ. ಬಾಡಿಗೆ, ಇನ್‌ಷ್ಯೂರೆನ್ಸ್ ಮತ್ತು ಲೋಡಿಂಗ್-ಅನ್ ಲೋಡಿಂಗ್ ಚಾರ್ಜಸ್ ಸೇರಿ ಇಷ್ಟು ಹಣ ಆಯಿತು ಎಂದು ಅವರು ಹೇಳಿದರು. ಅದರ ಜೊತೆಗೆ, ಕೆಳಗೆ ಒಂದು ಐಟಂ ಸೇರಿಸಿದರು. ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚು ಗಮನ ಕೊಟ್ಟು ಕೇಳಬೇಕು. ಏನೆಂದರೆ, ಬಿಜಾಪುರ ಜಿಲ್ಲೆಯ, ಜಳಕಿ ಚೆಕ್‌ಪೋಸ್ಟ್‌ನಲ್ಲಿ ಕೊಡಲಿಕ್ಕೆ ಒಂದು ಸಾವಿರ ರೂಪಾಯಿ ಲಂಚದ್ದನ್ನು, ಟ್ರಾನ್ಸ್‌ಪೋರ್ಟ್ ಮಾಲೀಕರು ಅದರ ಕೆಳಗಡೆ ಸೇರಿಸಿದರು. ಅಂದಮೇಲೆ, ನಮ್ಮ ರಾಜ್ಯದ ಇಂಡಿ ತಾಲ್ಲೂಕಿನಲ್ಲಿರತಕ್ಕ ಏನು ಜಳಕಿ ಚೆಕ್‌ಪೋಸ್ಟ್ ಇದೆ, ಭ್ರಷ್ಟಾಚಾರಕ್ಕೆ ಇಡೀ ರಾಷ್ಟ್ರವ್ಯಾಪ್ತಿ ಪರಿಚಯ ಅದು. ಜಳಕಿ ಚೆಕ್‌ಪೋಸ್ಟ್‌ನಲ್ಲಿ ಲಂಚ ಕೊಡಲಿಕ್ಕೆ ಒಂದು ಸಾವಿರ ರೂಪಾಯಿ ಎಂದು ಪೇ ಬಿಲ್‌ನಲ್ಲಿ ಬರೆದಿದ್ದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಅದಕ್ಕೆ ಚೆಕ್‌ಪೋಸ್ಟ್ ಎಕ್ಸಪೆಂಡಿಚರ್ ಎಂದು ಬರೆದಿದ್ದಾನೆ, ಲಂಚ ಎಂದು ಬರೆದಿಲ್ಲ. ಅದಕ್ಕೆ, ಈ ಭ್ರಷ್ಟಾಚಾರ ಯಾವ ಮಟ್ಟಕ್ಕೆ ಹೋಗಿದೆ ಎನ್ನುವುದರ ಬಗ್ಗೆ, ನಾನು ತಮ್ಮ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನೊಂದು ವಿಷಯ. ನಾವು ಮೀನುಗಳನ್ನು ಸಾಕುವುದನ್ನು ನೋಡಿದ್ದೇವೆ. ಕೆರೆಗಳಲ್ಲಿ ಮೀನು ಸಾಕುವುದನ್ನು ನೋಡಿದ್ದೇವೆ. ಹೊಂಡಗಳಲ್ಲಿ ಮೀನು ಸಾಕುವುದನ್ನು ನೋಡಿದ್ದೇವೆ. ಬಾವಿಗಳಲ್ಲಿ ಮೀನು ಸಾಕುವುದನ್ನು ನೋಡಿದ್ದೇವೆ. ಆದರೆ, ಬಿಜಾಪುರ ಜಿಲ್ಲಾ ಪಂಚಾಯ್ತಿಯಲ್ಲಿ, ತಾವು ರೆಕಾರ್ಡ್ಸ್ ತರಿಸಿ ನೋಡಬಹುದು. ಬಿಜಾಪುರ ಜಿಲ್ಲಾ ಪಂಚಾಯ್ತಿಯಲ್ಲಿ ಮೀನುಗಳನ್ನು ಭೀಮಾ ನದಿಯೊಳಗೆ ಸಾಕಿದ್ದಾರೆ. ಭೀಮಾ ನದಿಯೊಳಗೆ ಮೀನುಗಳನ್ನು ಸಾಕಾಣಿಕೆ ಮಾಡಲಿಕ್ಕೆ ಸುಮಾರು 13 ಲಕ್ಷ ರೂ. ಹಣ ಖರ್ಚುಮಾಡಿದ್ದಾರೆ. ಭೀಮಾ ನದಿಯೊಳಗೆ ಬಿಟ್ಟರೆ, ಅದು ಹರಿದು ಸಮುದ್ರಕ್ಕೆ ಹೋಗಿ ಸೇರುತ್ತದೆ. ಭ್ರಷ್ಟಾಚಾರ ಯಾವರೀತಿ ನಡೆಯುತ್ತಾ ಇದೆ ಎಂಬುದಕ್ಕೆ ನಾನು ಉದಾಹರಣೆ ಹೇಳುತ್ತಿದ್ದೇನೆ. ನೀರು ಇಲ್ಲದೇ ಇರತಕ್ಕ ಭೀಮಾ ನದಿಯೊಳಗೆ ಮೀನು ಸಾಕುವುದಕ್ಕೆ 13 ಲಕ್ಷ ರೂ. ಖರ್ಚು ಹಾಕಿದ್ದಾರೆ, ದಯವಿಟ್ಟು ಸರ್ಕಾರದವರು ಇದನ್ನು ತರಿಸಿ ನೋಡಿದರೆ ಸ್ವಲ್ಪ ಗೊತ್ತಾಗುತ್ತದೆ. ಮಾನ್ಯ ಅಧ್ಯಕ್ಷರೇ, ಇವತ್ತು ನಾನು ಒಂದು ವಿಷಯ ಹೇಳಲಿಕ್ಕೆ ಬಯಸುತ್ತೇನೆ. ನಾವು ಯಾವ ಕೆಳಮಟ್ಟಕ್ಕೆ ಹೋಗಿದ್ದೇವೆಂದರೆ, ಏನು ಹಿಡಿ ಅನ್ನಕ್ಕಾಗಿ, ಗೇಣು ಬಟ್ಟೆಗಾಗಿ, ವೇಶ್ಯಾವೃತ್ತಿ ಮಾಡಿ ಬದುಕುತ್ತಾರೆ, ಅವರಿಂದಲೂ ಕೂಡ ಇವತ್ತು ಪೊಲೀಸರು ಪ್ರತಿ ತಿಂಗಳೂ ಲಂಚ ತೆಗೆದುಕೊಳ್ಳುತ್ತಾ ಇದ್ದಾರೆ. ಯಾವ ಮಟ್ಟಕ್ಕೆ ನಾವು ಹೋಗಿ ಮುಟ್ಟಿದ್ದೇವೆ, ದಯಮಾಡಿ, ತಾವು ಇದನ್ನು ಕಂಟ್ರೋಲ್ ಮಾಡಲಿಕ್ಕೆ, ನಮ್ಮ ನಾಯಕರಾದಂಥ

ಧರ್ಮಸಿಂಗ್ ಸಾಹೇಬರು, ಉಪ ನಾಯಕರಾದಂಥ ಸಿದ್ಧರಾಮಯ್ಯನವರು ಇಬ್ಬರೂ ಸೇರಿ, ಇದಕ್ಕೆ ಏನಾದರೊಂದು ಕಡಿವಾಣ ಹಾಕಬೇಕು. ಏನು ಸಮಾಜದಲ್ಲಿ ನೊಂದು, ಬೆಂದು ಬಂದಂಥ ಸಮಾಜಕ್ಕೆ ತಮ್ಮಿಂದ ಉಪಕಾರವಾಗಲಿ, ಈ ಸಂದರ್ಭದಲ್ಲಿ ಎಂದು ಹೇಳಿ, ತಾವೇನು ಬಜೆಟ್‌ನಲ್ಲಿ ಕೆಲವು ಉತ್ತಮವಾದಂಥ ಕಾರ್ಯಗಳನ್ನು ಮಾಡಿದ್ದೀರಿ. ಆನ್‌ಲೈನ್ ಲಾಟರಿ ರದ್ದು ಮಾಡಿದಿರಿ, ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತೆ, ರೈತರ ಸಾಲದ ಬಗ್ಗೆ ತಮಗೆ ಹೇಳುತ್ತೇನೆ. ಅರವತ್ತು ಕೋಟಿ ರೂಪಾಯಿ ತಾವು ಇಟ್ಟಿದ್ದೀರಿ. ಈ ಅರವತ್ತು ಕೋಟಿ ರೂಪಾಯಿಗಳಲ್ಲಿ ಎಷ್ಟು ಮಂದಿಗೆ ಸಾಲ ಕೊಡಲಿಕ್ಕೆ ಸಾಧ್ಯವಾಗುತ್ತದೆ? ನಮ್ಮ ರಾಜ್ಯದಲ್ಲಿ 224 ಕ್ಷೇತ್ರಗಳು ಇವೆ. ಭ್ರಷ್ಟಾಚಾರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಮುಗಿಸಿಬಿಡುತ್ತೇನೆ. 20 ಕ್ಷೇತ್ರ ಬಿಟ್ಟರೂ 200 ಕ್ಷೇತ್ರಗಳಲ್ಲಿ ರೈತರಿಗೆ ನಾವು ಬೆಳೆ ಸಾಲ ಕೊಡಬೇಕಾಗುತ್ತದೆ. 60 ಕೋಟಿ ರೂಪಾಯಿಗಳಲ್ಲಿ ನೀವು ಕೊಡುವುದಾದರೆ ಒಂದು ಕ್ಷೇತ್ರಕ್ಕೆ 25 ಲಕ್ಷ ರೂಪಾಯಿ ಬರುತ್ತದೆ. 25 ಲಕ್ಷ ರೂಪಾಯಿ ಒಂದು ತಾಲ್ಲೂಕಿಗೆ ರೈತರಿಗೆ 6 ಪರ್ಸೆಂಟ್‌ನಂತೆ ತಾವು ಸಾಲ ಕೊಟ್ಟಿದ್ದೇ ಆದರೆ ಎಷ್ಟು ಜನರನ್ನು ನಾವು ಸಂತೃಪ್ತಿಪಡಿಸಬಹುದು. ಕೇವಲ ನಾವು 50 ಜನರಿಗೂ ಕೂಡ ಮಾಡುವುದಕ್ಕಾಗುವುದಿಲ್ಲ. 50 ಸಾವಿರ ರೂಪಾಯಿಕೊಟ್ಟರೂ 50 ಜನರಿಗೂ ಕೂಡ ನಾವು ಮಾಡುವುದಕ್ಕಾಗುವುದಿಲ್ಲ. ಇವತ್ತು 10 ಸಾವಿರ ಜನ ಬಡವರು ಅರ್ಜಿ ಹಿಡಿದುಕೊಂಡು ನಿಮ್ಮ ಸಂಸ್ಥೆಗಳ ಮುಂದೆ ಬರುತ್ತಾರೆ. ಪಿ. ಎಲ್. ಡಿ ಬ್ಯಾಂಕ್ ಮುಂದೆ, ಸೊಸೈಟಿ ಮುಂದೆ ಸಹಕಾರಿ ಡಿ. ಸಿ. ಸಿ ಬ್ಯಾಂಕ್ ಮುಂದೆ, ಸಹಕಾರಿ ಸಂಸ್ಥೆಗಳ ಮುಂದೆ ಬರುತ್ತಾರೆ. 10 ಸಾವಿರ ಮಂದಿಗೂ ನೀವು ಡಿಸ್ಟ್ರಿಬ್ಯೂಟ್ ಮಾಡಿದಿರಿ ಅಂದರೆ ನೀವು ಕೊಡತಕ್ಕಂಥ 6 ಪರ್ಸೆಂಟ್ ಸಾಲ ಎರಡೂವರೆ ಸಾವಿರ ರೂಪಾಯಿ ಆಗುತ್ತದೆ. ಇವತ್ತು ಒಬ್ಬ ರೈತ ಅರ್ಜಿ ತಯಾರು ಮಾಡಬೇಕಾದರೆ 3 ಸಾವಿರ ರೂಪಾಯಿ ಖರ್ಚು ಬರುತ್ತದೆ. ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಸಮಯ ತೆಗೆದುಕೊಳ್ಳಬಾರದು ಎನ್ನುವ ಸಲುವಾಗಿ ಮುಗಿಸಬೇಕೆಂದು ಇದ್ದೆ. ಮಾನ್ಯ ಸಿದ್ಧರಾಮಯ್ಯನವರು ಹೇಳಿದರು ಇನ್ನೇನು ಉಳಿದಿದೆ ಹೇಳಿ ಹೆಚ್ಚು ಹಣ ಕೊಡುತ್ತೇನೆಂದು, ಅದಕ್ಕೆ ನಾನು ಈ ಮಾತು ಹೇಳಬೇಕಾಯಿತು. ಆದ್ದರಿಂದ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ ಒಂದು 400 ಕೋಟಿ ರೂಪಾಯಿಗಳನ್ನಾದರೂ ತಾವು 6 ಪರ್ಸೆಂಟ್ ಸಾಲಕ್ಕೆ ಒದಗಿಸಿದರೆ ತಾವು ಈ ನಾಡಿನ ರೈತರಿಗೆ ಉಪಕಾರ ಮಾಡಿದಂತೆ ಆಗುತ್ತದೆ. ತಾವು ಗ್ರಾಮೀಣ ಪ್ರದೇಶದಿಂದ ಏನು ಬಂದಿದ್ದೀರಿ, ಅದು ಸಾರ್ಥಕವಾಗುತ್ತದೆಂದು ಹೇಳಿ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈ ತರಹ ಎಲ್ಲಾ ಮಾನ್ಯ ಸದಸ್ಯರು ಎದ್ದುನಿಂತುಕೊಂಡರೆ ನಾವು ಏನು ಮಾಡುವುದು? ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಈಗ ಇನ್ನು 5 ನಿಮಿಷ ಮಾತ್ರ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿಲ್ಲ.....

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ದಯಮಾಡಿ ಸ್ವಲ್ಪ ಕೇಳಿ. 18 ಗಂಟೆಗಳ ಕಾಲ ಈ ಆಯುವ್ಯಯದ ಮೇಲೆ ಚರ್ಚೆಯಾಗಿದೆ. ಅದರಲ್ಲಿ 422 ನಿಮಿಷ ಬಿ.ಜೆ.ಪಿ. ಯವರಿಗೆ ಅವಕಾಶ ಕೊಟ್ಟಿದ್ದೇನೆ. 188 ನಿಮಿಷ ಪಕ್ಷೇತರರು ಮಾತನಾಡಿದ್ದಾರೆ. 140 ನಿಮಿಷ ಜನತಾದಳ (ಯು) ನವರು ಮಾತನಾಡಿದ್ದಾರೆ. 176 ನಿಮಿಷ ಕಾಂಗ್ರೆಸ್ಸ್‌ನವರು ಮಾತನಾಡಿದ್ದಾರೆ. 125 ನಿಮಿಷ ಜೆ.ಡಿ.ಎಸ್. ನವರು ಮಾತನಾಡಿದ್ದಾರೆ. ನಾನೀಗ ಸುಮಾರು 10 ಗಂಟೆಗಳ ಕಾಲ ವಿರೋಧಪಕ್ಷಕ್ಕೆ

ಅವಕಾಶ ಮಾಡಿಕೊಟ್ಟಿದ್ದೇನೆ. ದಯಮಾಡಿ ಎಲ್ಲರೂ ಸಹಕರಿಸಬೇಕು. ಮಾತನಾಡಬೇಕು ಎಂದು ಎಲ್ಲರಿಗೂ ಆಸೆ ಇದೆ. ಎಲ್ಲರಿಗೂ ಅವರವರ ಸಮಸ್ಯೆಗಳು, ಅವರವರ ಕ್ಷೇತ್ರದ ಸಮಸ್ಯೆಗಳು ಇವೆ ನಾನು ಒಪ್ಪುತ್ತೇನೆ. ಆದರೆ ಒಂದು ನಿಗದಿತ ಅವಧಿಯಲ್ಲಿ ಬಜೆಟ್ ಪಾಸಾಗಬೇಕಲ್ಲಾ. ನಾನು ಬಹಳ ಉದಾರವಾಗಿ ವಿರೋಧಪಕ್ಷದವರು ಮಾತನಾಡಲಿ, ಏಕೆಂದರೆ ಈ ಕಡೆ ಸದಸ್ಯರಿಗೆ ನಾನು ಅವಕಾಶ ಕೊಡಲಿಕ್ಕೆ ಆಗಲಿಲ್ಲ. ಆದರೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ದಯಮಾಡಿ ಕೇಳಿ. ಯಾರಾದರೂ ಒಬ್ಬರೂ ಇಬ್ಬರು ಮಾಡತನಾಡದೇ ಉಳಿದುಕೊಂಡಿದ್ದರೆ ಅವರಿಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಆದ್ದರಿಂದ ದಯಮಾಡಿ ಈಗ ಚರ್ಚೆ ಮುಗಿಸೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು 3–00 ಗಂಟೆಗೆ ಉತ್ತರ ಕೊಡಲಿ. ನಾವು ಬಜೆಟ್ ಪಾಸ್ ಮಾಡಿಕೊಡುತ್ತೇವೆ.

ಅಧ್ಯಕ್ಷರು : ಈ ತರಹ ಆದರೆ ಯಾವುದೇ ಒಂದು ಚರ್ಚೆಯನ್ನು ಮುಗಿಸುವುದಕ್ಕೆ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಸಾಯಂಕಾಲದ ಒಳಗಾಗಿ ನಾವು ಬಜೆಟ್ ಪಾಸ್ ಮಾಡಿಕೊಡುತ್ತೇವೆ.

ಅಧ್ಯಕ್ಷರು : ಪಾಸ್ ಮಾಡಿ ಕೊಡುತ್ತೀರಿ. ಒಂದು ನಿಗದಿತ ಅವಧಿಯಲ್ಲಿ ಆಗಬೇಕಲ್ಲಾ. ದಯಮಾಡಿ ತಾವು ಸಹಕರಿಸುತ್ತೀರಿ ಎಂದು ನಂಬಿದ್ದೇನೆ. ನಾನು ಉದಾರವಾಗಿ 10 ಗಂಟೆಗಳ ಕಾಲ ನಿಮಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಆದರೂ ನೀವು ಈ ರೀತಿ ಮಾಡಿದರೆ ಹೇಗೆ? ವಿರೋಧಪಕ್ಷಗಳಿಗೆ ನಾನು ಉದಾರವಾಗಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ತಾವೇನು ಈ ರೀತಿ ಮಾಡುತ್ತಿದ್ದೀರಿ? ತಾವು ವಿರೋಧಪಕ್ಷದ ನಾಯಕರಾಗಿದ್ದವರು.

ಶ್ರೀ ಜಗದೀಶ್ ಶೆಟ್ಟರ್ : ನಾನು ಬಜೆಟ್ ಮೇಲೆ ಮಾತನಾಡಿಲ್ಲ.

ಶ್ರೀ ಸಿದ್ಧರಾಮಯ್ಯ : ನಿಮ್ಮ ಲೀಡರ್‌ಗಳು ಮಾತನಾಡಿದ್ದಾರೆ. ನಿಮ್ಮನ್ನು ಮಾತನಾಡಬೇಡಿ ಎಂದು ಯಾರು ಹೇಳಿದರು? ಮಾನ್ಯ ಅಧ್ಯಕ್ಷರೇ, ಈಗಾಗಲೇ ಫ್ರಂಟ್‌ನಲ್ಲಿರತಕ್ಕಂಥ ಎಲ್ಲಾ ಮುಖಂಡರುಗಳು ಸೇರಿ ಸುಮಾರು 32 ಜನ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ್ದಾರೆ. 18 ಗಂಟೆಗಳ ಕಾಲ ಚರ್ಚೆ ನಡೆದಿದೆ. ನಿನ್ನೆ ಬಿ ಎ ಸಿ ಯಲ್ಲಿ 29ನೇ ತಾರೀಖು ಚರ್ಚೆಗೆ ಉತ್ತರ ಕೊಡುವುದು ಅಂತ ತೀರ್ಮಾನವಾಗಿತ್ತು. ಆದರೂ ಹೊಸಬರಿಗೆ ಅವಕಾಶ ಕೊಡಬೇಕೆಂದು ತಾವು ತೀರ್ಮಾನ ಮಾಡಿದಿರಿ. ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇವತ್ತು 30ನೇ ತಾರೀಖು ಈ ಸದನದಲ್ಲಿ ಹಣಕಾಸಿನ ಮಸೂದೆಗಳು ಪಾಸಾಗಬೇಕು; ಸರ್ಕಾರ ಉತ್ತರ ಕೊಡಬೇಕು ಮತ್ತೆ ವಿಧಾನ ಪರಿಷತ್ತಿನಲ್ಲಿ ಉತ್ತರ ಕೊಟ್ಟು ಅಲ್ಲಿ ಪಾಸಾಗಬೇಕು. ಮಾನ್ಯ ರಾಜ್ಯಪಾಲರು ಅದಕ್ಕೆ ಸಹಿ ಸಹ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ವೋಟ್ ಆನ್ ಅಕೌಂಟ್ ತೆಗೆದುಕೊಂಡಿರತಕ್ಕಂಥಾದ್ದು ಈ ತಿಂಗಳ ಕೊನೆಗೆ ಮುಗಿಯುತ್ತಿದೆ. ಆದ್ದರಿಂದ ದಯಮಾಡಿ ಮಾನ್ಯ ಸದಸ್ಯರುಗಳು ಸಹಕಾರ ಮಾಡಬೇಕು. ಸಾಕಷ್ಟು ಚರ್ಚೆಯಾಗಿದೆ. ತಾವು ಏನಾದರೂ ಕೇಳಬೇಕಾದರೆ ಕ್ಲಾರಿಫಿಕೇಷನ್‌ನಲ್ಲಿ ಕೇಳಿ ನಾನು ಉತ್ತರ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಹಿಂದೆ ಏಳು ಗಂಟೆಯವರೆಗೂ ಚರ್ಚೆ ಮಾಡಿದ್ದೇವೆ. ಮಧ್ಯಾಹ್ನದವರೆಗೂ ಚರ್ಚೆ ನಡೆಯಲಿ ಆಮೇಲೆ ಇಲ್ಲಿ ಪಾಸಾಗಿ ಕೌನ್ಸಿಲ್‌ಗೆ ಹೋಗಿ ಬರಲಿ.

ಗೊಂದಲ

ಶ್ರೀ ಸಿದ್ಧರಾಮಯ್ಯ : ಮಾನ್ಯ ಜಗದೀಶ ಶೆಟ್ಟರ್‌ರವರೇ, ತಾವು ಬಹಳ ಅನುಭವಿಗಳು. ದಯವಿಟ್ಟು ಸಹಕಾರ ಮಾಡಬೇಕು. ಈ ತರಹ ಒತ್ತಾಯ ಮಾಡಬಾರದು. ಇಲ್ಲಿಂದ ಹಣಕಾಸು ಮಸೂದೆಗಳು ಪಾಸಾಗಿ ಅಲ್ಲಿಗೆ ಹೋಗಿ ಅಲ್ಲಿ ಪಾಸಾಗಿ ಬರಬೇಕು.

ಗೊಂದಲ

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ದಯವಿಟ್ಟು ಸಹಕರಿಸಿ. ನಾನು ಸುಮಾರು 12 ಗಂಟೆಗಳ ಕಾಲ ವಿರೋಧಪಕ್ಷಕ್ಕೆ ಅವಕಾಶ ಮಾಡಿಕೊಟ್ಟಿದ್ದರೂ ನೀವು ಈ ರೀತಿ ಮಾಡಿದರೆ ಹೇಗೆ? ಎಲ್ಲರೂ ಮಾತನಾಡಬೇಕೆಂದರೆ ಹೇಗೆ? ನಾನು ನನ್ನ ಜವಾಬ್ದಾರಿಯನ್ನು ಅರಿತು ಸಿಂಹ ಪಾಲನ್ನು ನಿಮಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಸಹಕರಿಸಬೇಕು.

ನಾನು ಇಷ್ಟೊಂದು ಉದಾರವಾಗಿದ್ದರೂ ನೀವು ಈ ರೀತಿ ಮಾಡಿದರೆ ಹೇಗೆ? ದಯಮಾಡಿ ಸಹಕಾರ ಮಾಡಿ.

ಗೊಂದಲ

ಅಧ್ಯಕ್ಷರು : ಈಗ ಮಾನ್ಯ ಅರ್ಥ ಸಚಿವರು ಉತ್ತರ ಆರಂಭ ಮಾಡುತ್ತಾರೆ. ಯಾರಿಗೆ ಅವಕಾಶ ಸಿಕ್ಕಿಲ್ಲ. ಅವರು ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡುತ್ತೇನೆ.

ಗೊಂದಲ

ಶ್ರೀ ಸಿದ್ಧರಾಮಯ್ಯ : ಮಾನ್ಯ ಜಗದೀಶ ಶೆಟ್ಟರ್‌ರವರೇ, I never expected from you, Mr. Jagadish Shettar. ಇವರು 5 ವರ್ಷ Leader of the opposition ಆಗಿದ್ದರು. ಇಷ್ಟುಕಾಲ ಯಾವ ಕಾಲದಲ್ಲಿ ಆಗಿತ್ತು ಹೇಳಲಿ. 18 ಗಂಟೆಗಳ ಕಾಲ 32 ಜನ ಮಾತನಾಡಿದ್ದಾರೆ. ನಾನು ಹಿಂದೆ 5 ವರ್ಷಗಳ ಕಾಲ ಹಣಕಾಸಿನ ಮಂತ್ರಿಯಾಗಿದ್ದೆ. ಯಾವತ್ತೂ ಕೂಡ 20 ಜನಕ್ಕಿಂತ ಜಾಸ್ತಿ ಭಾಗವಹಿಸುತ್ತಾ ಇರಲಿಲ್ಲ. ಈ ಸಾರ್ತಿ 32 ಜನ ಭಾಗವಹಿಸಿದ್ದಾರೆ. ಬಹಳ ಸಂತೋಷ. ಇನ್ನೂ ಟೈಂ ಇದ್ದರೆ ನೀವೆಲ್ಲರೂ ಮಾತನಾಡಬಹುದಾಗಿತ್ತು. ನಮ್ಮದೇನೂ ತಕರಾರು ಇರಲಿಲ್ಲ. ಆದರೆ ನಿಮ್ಮ ಎಲ್ಲಾ ಪ್ರಮುಖ ನಾಯಕರುಗಳೆಲ್ಲಾ ಮಾತನಾಡಿದ್ದಾರೆ. ಲೀಡರ್ ಮಾತನಾಡಿದ್ದಾರೆ. ಡೆಪ್ಯೂಟಿ ಲೀಡರ್ ಮಾತನಾಡಿದ್ದಾರೆ. ಉದಾಸಿಯವರು ಮಾತನಾಡಿದ್ದಾರೆ. ಮಾಧುಸ್ವಾಮಿರವರು ಮಾತನಾಡಿದ್ದಾರೆ. ಹಿಂದುಗಡೆ ಇರುವವರೆಲ್ಲಾ ಮಾತನಾಡಿದ್ದಾರೆ. ದಯವಿಟ್ಟು ಸಹಕಾರ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಒಂದೇ ಒಂದು ತಾಸು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : No, No ನಾನು ಇಷ್ಟೊಂದು ಉದಾರವಾಗಿ ಅವಕಾಶ ಮಾಡಿಕೊಟ್ಟಿದ್ದರೂ ಪದೇ ಪದೇ ಅಡ್ಡಿ ಮಾಡುವುದು ಸರಿಯಲ್ಲ. ಅದು ರಚನಾತ್ಮಕವಾದ ಕೆಲಸ ಆಗುವುದಿಲ್ಲ. ಆ ಕಾರಣದಿಂದ ಯಾರಿಗೆ ಇಲ್ಲಿಗೆ ಅವಕಾಶ ಸಿಗಲಿಲ್ಲ ಅವರಿಗೆ ನಾನು ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಸಹಕರಿಸಬೇಕು. ಈಗ ಮಾನ್ಯ ಅರ್ಥ ಸಚಿವರಿಂದ ಉತ್ತರ.

ಗೊಂದಲ

ಶ್ರೀ ಸಿದ್ಧರಾಮಯ್ಯ : ದಯಮಾಡಿ ಕುಳಿತುಕೊಳ್ಳಿ. ಆಗೊಲ್ಲ; ನೀವು (ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಉದ್ದೇಶಿಸಿ) ಸೀನಿಯರ್ ಲೀಡರ್ ಆಗಿ, ಮೂರು ಸಲ ಗೆದ್ದು ಬಂದಿದ್ದೀರಿ. ನೀವು ಈ ರೀತಿ ಮಾಡಿದರೆ ಹೇಗೆ? This is not fair.

ಶ್ರೀ ಆರ್.ವಿ. ದೇಶಪಾಂಡೆ : ಫೈನಾನ್ಸ್ ಬಿಲ್ ಅಲ್ಲಿಗೆ ಹೋಗಿ ಪಾಸ್ ಆಗಿ ಬರಬೇಕಲ್ಲಾ. ದಯಮಾಡಿ ಕೋ-ಆಪರೇಟ್ ಮಾಡಿ. ನಾಳೆ ಹೌಸ್ ಇಲ್ಲ. ಈವತ್ತು ಲಾಸ್ಟ್ ಡೇಟ್. It has to go to upper House. Please co-operate.

ಶ್ರೀ ಸಿದ್ಧರಾಮಯ್ಯ : ಮುಂದಿನ ಸಾರಿ, ಬಜೆಟ್ ಮಂಡಿಸುವಾಗ ಒಂದು ತಿಂಗಳು ಮುಂಚಿತವಾಗಿ ಮಂಡಿಸೋಣ. 30 ದಿನ ಚರ್ಚೆ ಮಾಡೋಣ: I have no objection. ಎಲ್ಲಾ ಹೇಳಿದ್ದಾರೆ. ಅವರ ಕಾನ್‌ಸ್ಟಿಟ್ಯೂಯೆನ್ಸಿಗೆ ಸಂಬಂಧಪಟ್ಟಿದ್ದು ಇದ್ದರೆ, ಕ್ಲಾರಿಫಿಕೇಷನ್ ಕೇಳಿ; ನಾನು ಉತ್ತರ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಇನ್ನೊಂದು ತಾಸು ಅವಕಾಶ ಕೊಡಿ.

ಅಧ್ಯಕ್ಷರು : ತಾವು ವಿರೋಧಪಕ್ಷದ ನಾಯಕರಾಗಿದ್ದವರು. ಸುಮಾರು 12 ಗಂಟೆಗಳಿಗೂ ಮೇಲೆ ನಾನು ವಿರೋಧಪಕ್ಷಗಳಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ದಯಮಾಡಿ ತಾವು ಸಹಕರಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ನಾವು ಇವತ್ತು ಎಷ್ಟು ಹೊತ್ತಾದರೂ ಕುಳಿತುಕೊಳ್ಳುತ್ತೇವೆ. ಇನ್ನೂ ಸ್ವಲ್ಪ ಹೊತ್ತು ಚರ್ಚೆಗೆ ಅವಕಾಶ ಕೊಡಿ.

ಶ್ರೀ ಸಿದ್ಧರಾಮಯ್ಯ : ಇಲ್ಲಿ ಮಧ್ಯಾಹ್ನ 3 ಗಂಟೆಯೊಳಗೆ ಫೈನಾನ್ಸ್ ಬಿಲ್‌ಗಳು ಪಾಸಾಗಿ ಮೇಲ್ಮನೆಗೆ ಹೋಗಬೇಕು.

ಅಲ್ಲಿ ಉತ್ತರ ಕೊಡಬೇಕಾಗುತ್ತದೆ, ಅಲ್ಲಿ ಪಾಸ್ ಆಗಬೇಕಾಗುತ್ತದೆ, ನಾಳೆ 31ನೇ ತಾರಿಖಿನೊಳಗಡೆ ರಾಜ್ಯಪಾಲರ ಅಂಕಿತವಾಗಬೇಕಾಗುತ್ತದೆ, ನಾವು ಓಟ್ ಅನ್ ಅಕೌಂಟ್ ತೆಗೆದುಕೊಂಡಿರುವುದು ಈ ತಿಂಗಳ ಕೊನೆಯವರೆಗೆ ಮಾತ್ರ; ಓಟ್ ಅನ್ ಅಕೌಂಟ್ ಇನ್ನೂ ಒಂದು ತಿಂಗಳಿದೆ ಎನ್ನುವುದಾದರೆ ಇನ್ನು ನಿಧಾನವಾಗಿ ಮಾಡಬಹುದಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸರ್, ನಿಮಗೆ, ಸರ್ಕಾರಕ್ಕೆ ಏನಾಗಬೇಕು ಈ ಬಜೆಟ್ ಅನ್ನು ಪಾಸ್ ಮಾಡಿ ಕೊಡಬೇಕು, ನಾವೇನು ಈ ಕೆಲಸವನ್ನು ಮೊದಲು ಮಾಡುತ್ತಿದ್ದೇವೆಯೇ? ಆಯವ್ಯಯ ಇಲ್ಲಿಂದ ಆ ಮನೆಗೆ ಹೋಗಿ ಇಲ್ಲಿಗೆ ಬಂದು ಅಂಗೀಕರವಾಗಬೇಕು ಅಷ್ಟೆ ತಾನೇ, ಇಲ್ಲಿ ಮಧ್ಯಾಹ್ನದವರೆಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ. ಅದಾದ ಮೇಲೆ ಅಲ್ಲಿಗೆ ಕಳುಹಿಸಿಕೊಡೋಣ, ಸಂಜೆ ಐದು ಆಗಲಿ, ಆರು ಆಗಲಿ, ನಾವು ಪಾಸ್ ಮಾಡಿಕೊಡುತ್ತೇವೆ, ನಿಮಗೆ ಇನ್ನೇನು ಭರವಸೆ ಬೇಕು?

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಧ್ಯಾಹ್ನ 12 ಗಂಟೆವರೆಗೆ ಅವರುಗಳಿಗೆ ಮಾತನಾಡಲು ಅವಕಾಶಕೊಡಿ ನಂತರ ಉತ್ತರ ಕೊಡಲು ಅವಕಾಶ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏತಕ್ಕೆ ಒಂದು ಗಂಟೆಯವರೆಗೆ ಅವಕಾಶ ಮಾಡಿಕೊಡಿ.

ಶ್ರೀ ಸಿದ್ಧರಾಮಯ್ಯ : ಯಡಿಯೂರಪ್ಪನವರೇ, ಮಾನ್ಯ ಜಗದೀಶ್ ಶೆಟ್ಟರವರು ಹೇಳಿದರೆ ಅದಕ್ಕೆ ಬದ್ಧರಾಗಿ; 12 ಗಂಟೆಯವರೆಗೆ ಮಾತನಾಡಿ.

ಅಧ್ಯಕ್ಷರು : ಇನ್ನು ಒಂದು ಗಂಟೆಗಳು ಮಾನ್ಯ ಯಡಿಯೂರಪ್ಪನವರೆ, ಸದಸ್ಯರನ್ನು ನಿಯಂತ್ರಿಸಬೇಕು. ಹೀಗಾದರೆ ಆಗುವುದಿಲ್ಲ, ಹೊಸಬರು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ, ಪಟ್ಟಿಕೊಟ್ಟಿದ್ದಾರೆ, ಆ ಪ್ರಕಾರ ನಾನು ತೆಗೆದುಕೊಳ್ಳುತ್ತೇನೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತು ಏತಕ್ಕೆ ತಾವು ಇಷ್ಟೊಂದು ಬೇಸರ ಮಾಡಿಕೊಂಡಿದ್ದೀರಿ? ನಾವೆಲ್ಲಾ ಹೋಗುತ್ತೇವೆ, ಹಾಗೆ ಪಾಸ್ ಮಾಡಿಕೊಳ್ಳಿ, ನಾವು ಸರ್ಕಾರಕ್ಕೆ ಸಹಕರಿಸಲು ತಯಾರಿದ್ದೇವೆ, ನಾವ್ಯಾರೂ ಇರುವುದಿಲ್ಲ, ನೀವು ಪಾಸ್ ಮಾಡಿಕೊಂಡು ಹೋಗಿ, ಹೀಗೆ ಹಟಮಾಡಿದರೆ ಹೇಗೆ?

ಶ್ರೀ ಸಿದ್ಧರಾಮಯ್ಯ : ಬಿಸನೆಸ್ ಅಡ್ವೈಸರಿ ಕಮಿಟಿಯಲ್ಲಿ ನೀವು ಇದ್ದಾಗ ಏನು ತೀರ್ಮಾನವಾಯಿತೆಂಬುದನ್ನು ಯಡಿಯೂರಪ್ಪನವರೇ ಹೇಳಿ, 29ಕ್ಕೆ ಇಲ್ಲಿ ಉತ್ತರ ಕೊಡುತ್ತೇವೆ. 30ನೇ ತಾರೀಖಿಗೆ ಅಲ್ಲಿ ಉತ್ತರ ಕೊಡುತ್ತೇವೆಂದು ಹೇಳಿದ್ದು, ನಿನ್ನೆ ಹೇಳಿದ ಮೇಲೆ ನಿನ್ನೆ ಉತ್ತರ ಕೊಡಲಿಲ್ಲ, ಮಧ್ಯಾಹ್ನ ಇಲ್ಲ ನೀವಿಬ್ಬರು ಒಂದೇ ಊರಿನವರು, ತಮಾಷೆಗೆ ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲು ಮನವಿ ಏನೆಂದರೆ, 10–15 ನಿಮಿಷದವರೆಗೆ ಒಂದು ನಾಲ್ಕು ಸದಸ್ಯರಿಗೆ ಮಾತನಾಡಲು ಅವಕಾಶಮಾಡಿಕೊಡಿ.

ಅಧ್ಯಕ್ಷರು : ಈ ಐದಾರು ಜನ ಹತ್ತು ಹತ್ತು ನಿಮಿಷ ಮಾತನಾಡಲಿ, ಈಗ ಮಾನ್ಯ ಯೋಗಿಶ್‌ಭಟ್‌ರವರು ಮಾತನಾಡಲಿ.

†**ಶ್ರೀ ಎಸ್. ಯೋಗಿಶ್‌ಭಟ್ (ಮಂಗಳೂರು)** : ಮಾನ್ಯ ಅಧ್ಯಕ್ಷರೆ ಕೊನೆಗೆ ತಾವು ಕೊಟ್ಟ ಅವಕಾಶಕ್ಕೆ ವಿಶೇಷವಾದ ಧನ್ಯವಾದಗಳನ್ನು ಹೇಳಿ ನನ್ನ ಭಾಷಣವನ್ನು ಎರಡುಗಂಟೆಗಳ ಕಾಲ ಮಾತನಾಡಬೇಕೆಂದಿದ್ದೆ ಆದರೆ, 10 ನಿಮಿಷದಲ್ಲಿ ಮುಗಿಸಬೇಕಾಗಿರುವುದರಿಂದ, ಸಣ್ಣ ಕವಿತೆಯ ರೂಪದಲ್ಲಿ ನನ್ನ ಭಾಷಣವನ್ನು ಆರಂಭಮಾಡುತ್ತಿದ್ದೇನೆ.

> "ಕೃಷ್ಣ ಹೋದರು, ಧರ್ಮ ಬಂದರು, ಸಿದ್ಧರಾಮಣ್ಣ ಬಜೆಟ್ ತಂದರು ಮೂವತ್ತು ಸಾವಿರ ಕೋಟಿ ಸಾಲವಿದ್ದರೂ ಮಂಡಿಸಿದರು ಮಾತ್ರ ಮಿಗತೆ ಬಜೆಟ್; ಕಡಲ ಕೊರೆತಕ್ಕೆ ಇಲ್ಲ ಬಿಕ್ಕಾಸು, ಕೊಬ್ಬರಿ ಗೊಂಡಂಬಿಗೆ ಭಾರಿ ಲಾಸು, ವನಸ್ಪತಿ ಮೈದಾರವೆ ಕಹಿಯಾಯಿತು, ಹಿಟ್ಟು, ಸೀಮೆ ಎಣ್ಣೆ ಬೆಲೆ ಗಗನಕ್ಕೆ ಹೋಯಿತು, ಡೀಸೆಲ್ ಬೆಲೆ ಹೆಚ್ಚಾಯಿತು ಕಾರ್ಮಿಕ ರೋಧನ ಕೇಳದಾಯಿತು, ವಿದ್ಯಾರ್ಥಿಗಳಿಗೆ ನ್ಯಾಯ ಸಿಗದಾಯಿತು, ನಿರುದ್ಯೋಗಿ ವೇತನ ಎಲ್ಲಿ ಹೋಯಿತು? ಕಾಫಿ, ಅಡಿಕೆ, ತೆಂಗು, ಗೋಡಂಬಿಗೆ, ಸಾವು ಬದುಕಿನಂಚಿನ ಎಸ್‌ಎಸ್‌ಐಗಳಿಗೆ, ಬೆಸ್ತ, ನೇಕಾರ, ಕಾರ್ಮಿಕರಿಗೆ, ಬರದಿರಲಿ ಅಪಮೃತ್ಯು, ಅವನತಿ. ಬೇಡಿಕೆಯನ್ನು ಇಡುತ್ತಿದ್ದೇನೆ, ಅಧ್ಯಕ್ಷರೇ, ಅರವತ್ತು ಕೋಟಿ ರೂಪಾಯಿಗಳನ್ನು ರೈಲ್ವೆಗೆ ಕೊಟ್ಟು ಜೊಡಿಸಿ ಬೆಂಗಳೂರು ಮಂಗಳೂರನ್ನು, ಬರಲಿ ರಫ್ತು, ಪ್ರವಾಸೋದ್ಯಮದ ವೈಭವವನ್ನು, ತರಲಿ ಕರ್ನಾಟಕಕ್ಕೆ ಕೀರ್ತಿ ಸಂಪತ್ತನ್ನು. ಇನ್ನೊಂದು ಬೇಡಿಕೆ. ಏರ್‌ಪೋರ್ಟ್ ಎಸ್‌ಇಜೆಡ್‌ಗೆ ಶಕ್ತಿ ಕೊಡಿ, ಕೇಂದ್ರ ರಾಜ್ಯ ಜೊತೆಗೂಡಿ, ಎಂಒಯು ಬೇಗನೆ ಸೈನ್ ಮಾಡಿ, ಉದ್ದಿಮೆ ಉದ್ಯೋಗ ಬರಲು ಬಿಡಿ; ವಿನಂತಿ ಮಾಡುತ್ತಿದ್ದೇನೆ. ಸಿಇಟಿ ಗೊಂದಲ ಮುಗಿಸಿಬಿಡಿ, ವಿದ್ಯಾರ್ಥಿಗಳ ರಕ್ಷಣೆಗೆ ಧಾವಿಸಿಬಿಡಿ, ಕಾರಿದಾರ್,

ಲ್ಯಾಂಡ್ ಸ್ಕ್ಯಾಂ ಸಿಬಿಐಗೆ ಕೊಡಿ, ಲಂಚ ಭ್ರಷ್ಟಾಚಾರಕ್ಕೆ ಕೊನೆ ಮಾಡಿ. ಕೊನೆಯೊಂದು ಪ್ರಾರ್ಥನೆಯೊಂದಿಗೆ ಮುಗಿಸುತ್ತಿದ್ದೇನೆ. ಕನ್ನಡತಾಯಿ ಭುವನೇಶ್ವರಿಯೆ, ಬೇಡುವೆ ನಿನ್ನಲ್ಲಿ ವರಗಳನ್ನು, ಕೊಡು ಸರ್ಕಾರಕ್ಕೆ ಸನ್ಮತಿಯನ್ನು, ತಪ್ಪಿದರೆ ಶೀಘ್ರ ಸದ್ಗತಿಯನ್ನು."

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ, ನಾನು ಸಭೆಯಲ್ಲಿ ಹೇಳಿದರು, ಹೀಗೆ ನೀವು ಸಹಿ ಹಾಕುವುದು, ಆಮೇಲೆ ಸದಸ್ಯರು ನಿಮ್ಮ ಹತ್ತಿರ ಬರುವುದು ಸರಿಯಲ್ಲ. ನಮ್ಮ ಸದಸ್ಯರನ್ನು ಭೇಟಿ ಅವರ ಕಾಗದಪತ್ರಗಳನ್ನು ನೋಡುವುದಕ್ಕೆ ಒಂದು ಗಂಟೆಗಳ ಕಾಲ ಕಾಲಾವಕಾಶ ಕೊಡಲಿ, ಇದನ್ನು ಎಷ್ಟೋ ಸಾರಿ ಹಿಂದಿನ ಸಭಾಧ್ಯಕ್ಷರು ಹೇಳಿದ್ದಾರೆ, ನಾನು ನೋಡುತ್ತಲೇ ಇದ್ದೇನೆ, ಅದಕ್ಕೋಸ್ಕರ ಇದು ಸರಿಯಲ್ಲವೆಂದು ಬಜೆಟ್ ಕೊನೆಯ ದಿವಸ ಹೇಳುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಈಗಿನ ಮುಖ್ಯಮಂತ್ರಿಗಳು, ಏನಾದರೂ ತೆಗೆದುಕೊಂಡು ಕೊಟ್ಟರೆ ಬರೆಯುತ್ತಾರೆ ಸಧ್ಯ, ಕೆಲವು ಮುಖ್ಯಮಂತ್ರಿಗಳು ಹಾಗೆಯೇ ಕೊಡುತ್ತಿದ್ದರು ಅದೇ ಗೋಳು.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, 2004–05ರ ಆಯವ್ಯಯದಲ್ಲಿ ಇಪ್ಪತ್ತೈದು ಸಾವಿರದ ಐನೂರ ಹತ್ತು ಪಾಯಿಂಟ್ ಮೂವತ್ತೊಂದು ಕೋಟಿ ರೂ. ಜಮೆ, ಇಪ್ಪತ್ತೈದು ಸಾವಿರದ ನಾನೂರು ಮೂವತ್ತೇಳು ಪಾಯಿಂಟ್ ನಾಲ್ಕು ಎಂಟು ಕೋಟಿ ರೂ. ವೆಚ್ಚದ ಈ ಬಜೆಟ್‌ನಲ್ಲಿ ಎಪ್ಪತ್ತೆರಡು ಪಾಯಿಂಟ್ ಎಂಬತ್ತುನೂರು ಕೋಟಿ ಮಿಗಕ್ಕೆ ಹೇಗೆ ಬಂತು ಎಂದು ಹೇಳುವುದರ ಬಗ್ಗೆ ನನಗೆ ವಿವರ ಕೊಡಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ನಾಲ್ಕು ತಿಂಗಳ ಹಿಂದೆ ಸನ್ಮಾನ್ಯ ಎಸ್.ಎಂ. ಕೃಷ್ಣರವರು ನಾನೂರು ಪಾಯಿಂಟ್ ಏಳು ಒಂಭತ್ತು ಕೋಟಿಯ ಕೊರತೆಯ ಬಜೆಟ್ ಅನ್ನು ಮಂಡಿಸಿರುವ ಹಿನ್ನೆಲೆಯಲ್ಲಿ ಈ ನಾಲ್ಕು ತಿಂಗಳಲ್ಲಿ ರಾಜ್ಯದಲ್ಲಿ ಈ ಆರ್ಥಿಕ ಶಕ್ತಿಗಳು ಏನು ಬಂತು, ಏನು ಆರ್ಥಿಕ ಪ್ರವಾಹ ಅಥವಾ ಆರ್ಥಿಕ ತಾಕತ್ತು ಬಂತು, ನಾಲ್ಕೇ ತಿಂಗಳಲ್ಲಿ ಏನು ಬದಲಾವಣೆಯಾಯಿತೆನ್ನುವುದನ್ನು, ಖಂಡಿತ ತಮ್ಮಿಂದ ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಕನ್ಸಾಲಿಡೇಷನ್ ಫಂಡ್‌ನಿಂದ ತಾವು ಎಷ್ಟು ಹಣವನ್ನು ಡ್ರಾ ಮಾಡಿದ್ದೀರೆನ್ನುವ ಬಗ್ಗೆ ತಾವು ವಿವರ ಕೊಡಬೇಕು, ಪಿಡಬ್ಲ್ಯುಡಿ ಮತ್ತು ಇರಿಗೇಷನ್ ಕಾಮಗಾರಿಗಳಿಗೆ ಕೊಡುವ ಬಾಕಿ ಎಷ್ಟಿದೆ, 11ನೇ ಫೈನಾನ್ಸ್‌ನಲ್ಲಿ ನಮಗೆ ರೋಡ್‌ಗೆ ಬಂದ ಈ ಕೇಂದ್ರದ ಹಣವನ್ನು ಸಂಬಳಕ್ಕೆ ನಾವು ಉಪಯೋಗಿಸಿದ್ದೇವೆಯೇ; 30 ಸಾವಿರ ಕೋಟಿ ರೂ. ಸಾಲದಲ್ಲಿ ಕೇವಲ 16 ಪರ್ಸೆಂಟ್ ಅನ್ನು ಮಾತ್ರ ಪ್ಲಾನ್‌ಗೆ ಉಪಯೋಗ ಮಾಡಿ ಉಳಿದದ್ದನ್ನು ನಾನ್ ಪ್ಲಾನ್ ಆಗಿ ಖರ್ಚು ಮಾಡಿದ್ದು ನಿಜವೇ? ಇದೆಲ್ಲದರ ಬಗ್ಗೆ ವಿವರ ಕೊಡಬೇಕು, ಶ್ವೇತಪತ್ರವನ್ನು ಹೊರಡಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ರಾಜ್ಯದ ಆರ್ಥಿಕತೆಯ ಬಗ್ಗೆ ತಾವು ಉಲ್ಲೇಖ ಮಾಡಿದ ಸಂದರ್ಭದಲ್ಲಿ 1999–2004ರ ಅವಧಿಯಲ್ಲಿ ಹನ್ನೆರಡು ಸಾವಿರದ ನಾನೂರ ಅರವತ್ತೈದು ಕೋಟಿ ರೂಪಾಯಿಗಳಿಂದ ಮೂವತ್ತು ಸಾವಿರದ ನೂರಎಂಬತ್ತೆಂಟು ಕೋಟಿ ರೂ. ಹೋದುದರ ಬಗ್ಗೆ ಏನು ಆರ್ಥಿಕ ಧಕ್ಕೆ ಬಂದಿದೆ ಎನ್ನುವುದನ್ನು ದಿಟ್ಟವಾಗಿ ಹೇಳಿದ್ದಕ್ಕೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ನಾನು ನೇರವಾಗಿ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕರಾವಳಿ ಪ್ರದೇಶಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಅನ್ಯಾಯವಾಗಿದೆ ಎಂದು ತಮ್ಮಗಮನಕ್ಕೆ ತರುತ್ತಿದ್ದೇನೆ. ಐವತ್ತು ಸಾವಿರ ಕಿ.ಲೋ. ಲೀಟರ್‌ಗೆ ಮಾರಾಟ ತೆರಿಗೆಯಿಂದ ವಿನಾಯಿತಿ ಕೊಟ್ಟಿರುವುದಕ್ಕೆ ನಾನು ಅಭಿನಂದಿಸುತ್ತೇನೆ. ಆದರೆ ಎಪ್ಪತ್ತೈದು

ಕಿ.ಲೋ. ಲೀಟರ್ ನಮಗೆ ಅವಶ್ಯಕವಾಗಿ ಬೇಕು, ಫೆಬ್ರವರಿ ತಿಂಗಳಲ್ಲಿ ತಾವು ಕೊಟ್ಟಿರುವ ಕೋಟಾ ಖಾಲಿಯಾಗಿರುವುದರಿಂದ, ಕನಿಷ್ಟ ಇದನ್ನು ಎಪ್ಪತ್ತೈದು ಸಾವಿರ ಕಿ.ಲೋ. ಲೀಟರ್‌ಗೆ ಏರಿಸಬೇಕೆಂದು ವಿನಂತಿ ಮಾಡುತ್ತೇನೆ. ಮಂಗಳೂರನ್ನು ಸರ್ವಋತು ಬಂದರನ್ನಾಗಿ ಮಾಡಿ ಮೀನುಗಾರಿಕೆಗೆ ಎಲ್ಲ ಸೌಲಭ್ಯವನ್ನು ಒದಗಿಸಬೇಕೆಂದು ವಿನಂತಿ ಮಾಡುತ್ತೇನೆ. ಕಡಲುಕೊರೆತದ ಬಗ್ಗೆ ಸಾಕಷ್ಟು ಚರ್ಚೆಗಳಾಗುತ್ತಿವೆ, ನಮಗೆ ಫ್ರೆಂಚ್ ಟೆಕ್ನಾಲಜಿ ಖಂಡಿತಾ ಬೇಡ, ನ್ಯೂ ಮಂಗಳೂರು ಪೋರ್ಟ್ ಟ್ರಸ್ಟ್‌ನವರು ಹೇಗೆ ಕಡಲು ಕೊರೆತ, ಹಾಗೂ ಇನ್ನಿತರ ಕಾಮಗಾರಿಗಳನ್ನು ಮಾತನಾಡಿದ್ದಾರೆ, ಅದುದರಿಂದ ಇಂಡಿಯನ್ ಟೆಕ್ನಾಲಜಿಯನ್ನು ಅಳವಡಿಸಿ; ಈ ನಿಟ್ಟಿನಲ್ಲಿ ಒಂಭತ್ತು ಕೋಟಿ ಅರವತ್ತೈದು ಲಕ್ಷ ರೂಪಾಯಿಗಳನ್ನು ಹಿಂದಿನ ಸರ್ಕಾರ ಮಂಜೂರು ಮಾಡಿರುವುದರಲ್ಲಿ ಒಂಭತ್ತು ಕೋಟಿ ರೂ. ಯನ್ನು ತಾವು ವಿತ್‌ಡ್ರಾ ಮಾಡಿದ್ದೀರೆಂಬುದರ ಬಗ್ಗೆ ನನ್ನಲ್ಲಿ ಮಾಹಿತಿ ಇದೆ, ತಾವು ಅದನ್ನು ಸರಿಪಡಿಸಬೇಕು ಎಂದು ವಿನಂತಿ ಮಾಡುತ್ತೇನೆ. ಇದರಲ್ಲಿ ಸಾವಿರಾರು ಬಡವರು ಸಾಕಷ್ಟು ನೊಂದವರಿದ್ದಾರೆ, ಅದಕ್ಕೆ ತಕ್ಷಣ ಹಾಗೂ ಶಾಶ್ವತ ಪರಿಹಾರಗಳೆರಡರ ಬಗ್ಗೆ ತಾವು ಯೋಚನೆ ಮಾಡಬೇಕು, ಕೇಂದ್ರ ಸರ್ಕಾರ ನಮಗೆ ಸಹಕಾರ ಕೊಡಬೇಕೆನ್ನುವ ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ಮಂಗಳೂರು ಬೆಂಗಳೂರು ಬ್ರಾಡ್‌ಗೇಜ್ ರೈಲ್ವೆ ಕನ್ವರ್ಷನ್‌ಗೆ ಸಂಬಂಧಿಸಿದಂತೆ ನಿಂತಿರುವ ದೊಡ್ಡ ಒಂದು ತೊಡಕೆಂದರೆ, ರಾಜ್ಯ ಸರ್ಕಾರದ ಅರವತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡದಿರುವುದರಿಂದ, ಇಷ್ಟು ವರ್ಷ ಎಂಒಯು ಮಾಡಿದ ರೂ. ಕೂಡ ತೊಂದರೆಯಾಗಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು 60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದಲ್ಲಿ ಕನಿಷ್ಟ ಡಿಸೆಂಬರ್ ಅಥವಾ ಜನವರಿಯೊಳಗೆ ಮಂಗಳೂರಿನಿಂದ ಬೆಂಗಳೂರಿಗೆ ರೈಲು ಬರಲು ಸಾಧ್ಯವಾಗುತ್ತದೆ.

11.10 ಎ ಎಂ

ಕೇಂದ್ರ ಸರ್ಕಾರ ಎಲ್ಲಾ ಹಣವನ್ನು ಕೊಟ್ಟರೂ ಸಹ ರಾಜ್ಯ ಸರ್ಕಾರ ಬಿಡುಗಡೆ ಮಾಡಿಲ್ಲ. ಇದನ್ನು ತಾವು ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಮಂಗಳೂರು ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟ ಹಾಗೆ, ವಿಶೇಷವಾಗಿ ಅಂತರಾಷ್ಟ್ರೀಯ ಮಟ್ಟಕ್ಕೆ ಸಂಬಂಧಪಟ್ಟ 100 ಕೋಟಿ ರೂ.ಗಳ ಪ್ಯಾಕೇಜ್ ಕೇಂದ್ರ ಸರ್ಕಾರದಲ್ಲಿ ರೆಡಿಯಿದೆ, ಆದರೆ ಇಲ್ಲಿ ಭೂಸ್ವಾಧೀನತೆ ಮತ್ತು ಪುನರ್ವಸತಿ ಕಾರ್ಯಗಳಿಗಾಗಿ 17 ಕೊಟಿ ರೂ. ಗಳನ್ನು ತಾವು ಬಿಡುಗಡೆ ಮಾಡಬೇಕಾಗಿದೆ. ತಕ್ಷಣ ಅದನ್ನು ಬಿಡುಗಡೆ ಮಾಡಬೇಕು. ರಾಜ್ಯದ ರಫ್ತು ಪ್ರವಾಸೋದ್ಯಮಕ್ಕೆ ಒಂದು ಹೊಸ ಶಕ್ತಿ ಈ ನಿಟ್ಟಿನಲ್ಲಿ ಆಗುತ್ತದೆ ಎಂದು ಮಾಹಿತಿಯನ್ನು ಕೊಡುತ್ತಿದ್ದೇನೆ. ಕರ್ನಾಟಕ ರಾಜ್ಯಕ್ಕೆ ಆರ್ಥಿಕ ಶಕ್ತಿ ಎಂದರೆ ಉದ್ಯೋಗಾವಕಾಶ ಕೊಡತಕ್ಕಂಥ ಇನ್ನೊಂದು ಕ್ಷೇತ್ರ Special Economic Zone. ಈ Special Economic zone ಗೆ ಇವತ್ತಿನ ತನಕ ಎಂಒಯು ಮಾಡಿಲ್ಲ, ಈ ತಕ್ಷಣ ಎಂಒಯು ಮಾಡುವಂತಹ ಕಾರ್ಯವನ್ನು ಮಾಡಬೇಕು. Global investment meet - ಅನ್ನು ಮಂಗಳೂರಿನಲ್ಲಿ ಮಾಡಬೇಕು ಅಂತ ವಿನಂತಿ ಮಾಡಿ ಬಹುಶಃ ಈ ಮೂಲಕ ರಾಜ್ಯಕ್ಕೆ ಆರ್ಥಿಕ ಶಕ್ತಿ ಬರುತ್ತದೆ ಉದ್ಯೋಗ ಅವಕಾಶ ಬರುತ್ತದೆ, ಹೆಚ್ಚಿನ ಉದ್ದಿಮೆಗಳು ಬರುತ್ತವೆ, ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ. ವಿಶೇಷವಾಗಿ ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟಂತೆ ಕರಾವಳಿ ಪ್ರದೇಶದಲ್ಲಿ ಸುಂದರವಾದ ಬೀಚ್ ಟೂರಿಸಂ ಇರಬಹುದು, ಸುಲ್ತಾನ್‌ಬತೇರಿಯಿಂದ

ಬೇಂಗ್ರೆತನಕ ರೋಪ್‌ವೇ ಬ್ರಿಡ್ಜ್ ಇರಬಹುದು ಅಥವಾ ಅನೇಕ ರೀತಿಯಲ್ಲಿರುವಂತಹ ಜಲಕ್ರೀಡೆಗಳಿರಬಹುದು, ಬೇರೆ ಬೇರೆ ರೀತಿಯಲ್ಲಿ ಟೂರಿಸಂ ಆಕರ್ಷಣೀಯ ಕೇಂದ್ರವಾಗಿ ನಮ್ಮ ಕರಾವಳಿ ಪ್ರದೇಶವನ್ನು ಬೆಳೆಸಬೇಕಾಗಿದೆ. ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ತಾವು ಮಾಡುವ ಮೂಲಕ ಇದಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡಬೇಕೆಂದು ವಿನಂತಿ ಮಡುತ್ತಾ, ಬೇಂಗ್ರೆ

ಪ್ರದೇಶಗಳಲ್ಲಿ ಸಾವಿರಾರು ಮನೆಗಳಿವೆ, ಕಳೆದ ಹಲವು ದಶಕಗಳಿಂದ ಅವರಿಗೆ ಹಕ್ಕುಪತ್ರಗಳು ಸಿಕ್ಕಿಲ್ಲ, ಅದನ್ನು ಕೊಡುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ವಿನಂತಿ ಮಾಡಿ, ಗೇರುಬೀಜಕ್ಕೆ ಸಂಬಂಧಪಟ್ಟ ಹಾಗೆ ನೇರವಾಗಿ ಬರುತ್ತಾ ಇದ್ದೇನೆ ಅಧ್ಯಕ್ಷರೇ, ಸುಮಾರು 160 ಗೇರುಬೀಜ ಪರಿಷ್ಕರಣ ಕೇಂದ್ರಗಳು ನಮ್ಮ ರಾಜ್ಯದಲ್ಲಿವೆ, 35 ಸಾವಿರ ಮಹಿಳಾ ಕಾರ್ಮಿಕರು ಈ ಬಗ್ಗೆ ದುಡಿಯುತ್ತಾ ಇದ್ದಾರೆ, ಈ ಸಂದರ್ಭದಲ್ಲಿ 5 ರಿಂದ 8 ಪರ್ಸೆಂಟ್ ತೆರಿಗೆ ಏರಿಸಿರುವುದು ಮಾತ್ರವಲ್ಲ ಒಟ್ಟಾರೆ ಸೆಸ್‌ಗಳನ್ನೆಲ್ಲಾ ಲೆಕ್ಕಹಾಕಿದರೆ 12.33 ತೆರಿಗೆ ಬರುತ್ತಾ ಇದೆ. ಪಕ್ಕದ ಮಹಾರಾಷ್ಟ್ರದಲ್ಲಿರಬಹುದು ಗೋವಾದಲ್ಲಿರಬಹುದು ಕೇರಳ ಅಥವಾ ರಾಜಾಸ್ತಾನದಲ್ಲಿರಬಹುದು 4 ಪರ್ಸೆಂಟ್‌ಗಿಂತ ಹೆಚ್ಚಿಗೆ ಏರಿಸಿಲ್ಲ ಅವರು, ಅಂತಹ ಸಂದರ್ಭದಲ್ಲಿ 12.33 ತೆರಿಗೆ ಎಂದು ಹೇಳಿದರೆ ಒಟ್ಟಾರೆ ಇದರಿಂದ ಲಾಭ ಬರುವುದು ಒಂದಿಂದ ಎರಡು ಪರ್ಸೆಂಟ್ ಮಾತ್ರ, 12.33 ಪರ್ಸೆಂಟ್ ಬಂದಿರುವುದರಿಂದ ದೊಡ್ಡ ಹೊಡೆತ ಈ ಉದ್ದಿಮೆಗೆ ಬೀಳುತ್ತದೆ, ಖಂಡಿತ ಇದಕ್ಕೆ ಅವಕಾಶ ಕೊಡಬಾರದು ಅಂತ ವಿನಂತಿ ಮಾಡಿ ತೆಂಗಿನೆಣ್ಣೆಗೆ ಸಂಬಂಧಪಟ್ಟಂತೆ 4 ಪರ್ಸೆಂಟ್ ಇದ್ದುದ್ದನ್ನು 20 ಪರ್ಸೆಂಟ್ ಮಾಡಿದಿರಿ, ನಮ್ಮ ಕರಾವಳಿ ಪ್ರದೇಶದಲ್ಲಿ ಇದು ಆಹಾರವಸ್ತುವಾಗಿದೆ, ಆಹಾರವಸ್ತುವಾಗಿರುವುದನ್ನು ಈ ರೀತಿ ಏರಿಸಿರುವುದರಿಂದ ನಮಗಂತೂ ಅನ್ಯಾಯವಾಗಿದೆ. ಇದನ್ನು ಪುನಃ 4 ಪರ್ಸೆಂಟಿಗೆ ಇಳಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿ ನುಸಿಪೀಡೆಯಿಂದ ತೊಂದರೆಗೊಳಗಾಗಿರುವ ಈ ತೆಂಗಿನ ಕೃಷಿ ಅದರ ಉತ್ಪನ್ನಗಳಿಗೆ ಇದರಿಂದ ನಿಜವಾಗಿ ಧಕ್ಕೆ ಬರುತ್ತಾ ಇದೆ. ಈ ನಿಟ್ಟಿನಲ್ಲಿ ತಾವು ಅದನ್ನು ಪುನರ್ವಿಮರ್ಶೆ ಮಾಡಿ 4 ಪರ್ಸೆಂಟ್‌ಗೆ ಇಳಿಸಬೇಕೆಂದು ವಿನಂತಿ ಮಾಡಿ, ಆಮೇಲೆ ವನಸ್ಪತಿಗೆ 5 ರಿಂದ 8 ಪರ್ಸೆಂಟ್, ಸೀಮೆಎಣ್ಣೆಗೆ 16 ರಿಂದ 20 ಪರ್ಸೆಂಟ್ ಡೀಸೆಲ್‌ಗೆ 17.5ರಿಂದ 20 ಪರ್ಸೆಂಟ್ ಗೊಧೀಹಿಟ್ಟು ಮೈದಾ ಮತ್ತು ರವೆ 2ರಿಂದ 4 ಪರ್ಸೆಂಟ್ ಚಹಾ 8ರಿಂದ 12 ಪರ್ಸೆಂಟಿಗೆ ಏರಿಸಿದಿರಿ, ಈ ಏರಿಸಿರುವುದನ್ನು ಪುನರ್‌ವಿಮರ್ಶಿಸಿ ಹಿಂದಿನ ತೆರಿಗೆಗೆ ಇಳಿಸಬೇಕೆಂದು ವಿನಂತಿ ಮಾಡುತ್ತಾ ಇದ್ದೇನೆ. ಮತ್ತೆ ತೆರಿಗೆಗೆ ಸಂಬಂಧಪಟ್ಟಂತೆ ಸಚಿವರೇ ವೃತ್ತಿ ತೆರಿಗೆ ಏನು ಹಾಕಿದಿರಿ ಗೋಡೊನುಗಳಿಗೂ ತಾವು ಹಾಕಿದ್ದೀರಿ, ಇದು profession tax or vocation tax ಎಂದು ಹೇಳುವಂತೆ ಜನರಲ್ಲಿ ಸಂಶಯ ಬಂದಿದೆ. ಇದನ್ನು ತಾವು ಪುನರ್‌ವಿಮರ್ಶೆ ಮಾಡಬೇಕೆಂದು ವಿನಂತಿ ಮಾಡುತ್ತಾ ಇದ್ದೇನೆ. ಇದನ್ನು ಸಂಗ್ರಹ ಮಾಡುವುದನ್ನು ಸ್ಥಳೀಯಸಂಸ್ಥೆಗಳಿಗೆ ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ಸಲಹೆಯನ್ನೂ ಕೂಡ ಕೊಡುತ್ತಾ ಇದ್ದೇನೆ. ಸೇಲ್ಸ್ ಟ್ಯಾಕ್ಸಿನಲ್ಲಿ rate of interest for delayed paymentಗೆ 24% ಇದೆ. ಆದರೆ ರಿಫಂಡ್ ಆಗುವ ಹಣವೇನಿದೆ ಅದು 12 ಪರ್ಸೆಂಟಿರುವುದನ್ನು 6 ಪರ್ಸೆಂಟಿಗೆ ಇಳಿಸಿದ್ದೀರಿ ಇದು ಸರಿಯಲ್ಲ, ಸರಿಪಡಿಸಬೇಕೆಂದು ಹೇಳಿ, ರಾಜ್ಯದಲ್ಲಿ 62.66 ಪರ್ಸೆಂಟ್ ಅಂದರೆ ಸುಮಾರು 9372 ಕೋಟಿ ರೂ. ವಾಣಿಜ್ಯ ತೆರಿಗೆಯಿಂದ ಬಂದಿರುವಂತಹ ವ್ಯಾಪಾರಿಗಳನ್ನು ಗೌರವದಿಂದ ನೋಡುವಂತಹ ದೃಷ್ಟಿಕೋನ ಅವಶ್ಯಕತೆ ಇದೆ. ಮತ್ತೆ ವಿಶೇಷವಾಗಿ ಈ ಸಂದರ್ಭದಲ್ಲಿ ಕರಸಮಾಧಾನ ತರಹದ ಯೋಜನೆಗಳನ್ನು ತರಬೇಕು

ಎಂದು ವಿನಂತಿ ಮಾಡುತ್ತಿದ್ದೇನೆ. ಅಧ್ಯಕ್ಷರೇ, ಕೋರ್ಟಿನಲ್ಲಿ ಕೂಡ ನಾವು ವ್ಯಾಜ್ಯ ಹೂಡಬೇಕಿದ್ದರೆ 10 ಪರ್ಸೆಂಟನ್ನು ಠೇವಣಿ ಮಾಡಿ ವ್ಯಾಜ್ಯಕ್ಕೆ ಮುಂದುವರೆಯಬಹುದು, ಆದರೆ ಇಲ್ಲಿ 50 ಪರ್ಸೆಂಟನ್ನು ಠೇವಣಿ ಮಾಡಿ ವ್ಯಾಜ್ಯಕ್ಕೆ ಅಂದರೆ ಅಪೀಲಿಗೆ ನಾವು ಹೋಗಬೇಕು ಅಂತ ಹೇಳುವ ಸನ್ನಿವೇಶವನ್ನು ತಾವು ಸೃಷ್ಟಿಸಿದ್ದೀರಿ, ಇದು ಸರಿಯಲ್ಲವೆಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದರ ಜೊತೆಯಲ್ಲಿ inspection authority ಯಾವುದಿದೆ ಅವರಿಗೇ assessment powers ಅನ್ನು ಕೊಟ್ಟಿದ್ದೀರಿ. ನಮ್ಮ ರಾಜ್ಯದಲ್ಲಿ double assessment authority ಎಂದು ಕ್ರಿಯೇಟ್ ಮಾಡಿದಹಾಗಾಗುತ್ತದೆ. ಅನೇಕ ಸಮಸ್ಯೆಗಳಿಗೆ ಇದರಿಂದ ಕಾರಣವಾಗುತ್ತದೆ ಇದು ಸರಿಯಲ್ಲ, ಇದರ ಬಗ್ಗೆ ತಾವು ಪುನರ್‌ವಿಮರ್ಶೆಮಾಡಬೇಕೆಂದು ವಿನಂತಿ ಮಾಡಿ assessment autorityಗೆ ಟೈಂಬಾಂಡ್ ಹಾಕಿ ಇಷ್ಟೇ ದಿವಸದೊಳಗೆ ತಾವು ಆರ್ಡರ್ ಕೊಡುವುದನ್ನು ಮಾಡಬೇಕು. ಮತ್ತು ಅಪೀಲ್ ಮಾಡುವಂತಹ ಸಂದರ್ಭದಲ್ಲಿ ಟ್ರಿಬ್ಯೂನಲ್‌ನಲ್ಲಿ ಖಂಡಿತವಾಗಿ judiciary members ಅನ್ನೂ ಸಹ ಸೇರಿಸಬೇಕು ವಾಣಿಜ್ಯ ಅಧಿಕಾರಿಗಳನ್ನು ಮಾತ್ರವಲ್ಲ ಎಂದು ವಿನಂತಿ ಮಾಡಿ food processing ಘಟಕಗಳಿಗೆ 16 ಪರ್ಸೆಂಟ್ ಟ್ಯಾಕ್ಸ್ 15 ಸರ್‌ಚಾರ್ಜ್, 1.5 ಪರ್ಸೆಂಟ್ ಆರ್‌ಎಸ್‌ಟಿ 18.5 ಪರ್ಸೆಂಟ್ ತೆರಿಗೆ ಬರುತ್ತಾ ಇದೆ. ಬಹುಶಃ ಇದರಿಂದ ಕೃಷಿ ಉತ್ಪನ್ನಗಳಿಗೆ ಸಾಕಷ್ಟು ತೊಂದರೆಯಾಗುವುದರಿಂದ ಪಕ್ಕದ ರಾಜ್ಯಗಳ ಕೃಷಿ ಉತ್ಪನ್ನಗಳೊಂದಿಗೆ ಸ್ಪರ್ಧೆ ಮಾಡಲಿಕ್ಕೆ ಕಠಿಣವಾಗುವುದರಿಂದ ಇದರ ಬಗ್ಗೆ ತಾವು ಪುನರ್‌ವಿಮರ್ಶೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ VAT-Value Added Tax ಇದನ್ನು 2005ರ ಏಪ್ರಿಲ್ ಒಂದರಿಂದ ತರುವ ಮೊದಲೇ ಪೂರ್ವಭಾವಿಯಾಗಿ ರಿಜಿಸ್ಟ್ರೇಷನ್, ನಂಬರನ್ನು ಕೊಡುವಂತಹ ವ್ಯವಸ್ಥೆ ತಾವು ಮಾಡಬೇಕೆಂದು ವಿನಂತಿ ಮಾಡಿ, ಸಣ್ಣ ಕೈಗಾರಿಕೆಗಳಿಗೆ ಕೊಡುವಂತಹ 450 ಕೋಟಿ ರೂ. ಸಬ್ಸಿಡಿಯನ್ನು ತಾವು ಕೊಡಬೇಕೆಂದು ಅಂತ ವಿನಂತಿ ಮಾಡಿ ಅದರ ಜೊತೆಗೆ ಅಲ್ಲಿಯ ತನಕ sales tax exemption-ಕೊಡುವ ಮೂಲಕ 17 ಲಕ್ಷ ಜನರಿಗೆ ಉದ್ಯೋಗ ಕೊಟ್ಟ ಕೈಗಾರಿಕೆಗಳಿಗೆ ತಾವು ಹೆಚ್ಚಿನ ಆದ್ಯತೆ ಕೊಡಬೇಕೆಂದು ವಿನಂತಿ ಮಾಡುತ್ತಾ ಇದ್ದೇನೆ. ಸ್ವಂತ ವಿದ್ಯುತ್ ಉತ್ಪಾದಕರಿಗೆ ಮಾರಾಟ ಮಾಡುವ ಡೀಸೆಲ್ ಪೆಟ್ರೋಲ್‌ಗಳ ಮೇಲಿನ ಶೇಕಡ 4ರ ತೆರಿಗೆ ರಿಯಾಯ್ತಿ ಹಿಂದಕ್ಕೆ ತೆಗೆದುಕೊಂಡಿದ್ದೀರಿ . ನಮ್ಮಲ್ಲಿ ವಿದ್ಯುತ್ ಸ್ವಾವಲಂಭಿಯಾಗುವ ತನಕ ಇದನ್ನು ಮುಂದುವರೆಸಬೇಕು ಎಂದು ವಿನಂತಿ ತಮ್ಮಲ್ಲಿ ಮಾಡುತ್ತಾ ಇದ್ದೇನೆ. ಕೈಗಾರಿಕಾ ಒಕ್ಕೂಟಗಳೂ ಕೂಡ ಇನ್‌ಪುಟ್ ಮೇಲೆ 15 ಪರ್ಸೆಂಟ್ ಸೆಸ್ ಗ್ರಾಹಕರಿಂದ ವಸೂಲು ಮಾಡಲು ಆಗುತ್ತಾ ಇಲ್ಲ, ಈ ನಿಟ್ಟಿನಲ್ಲಿ ಅದನ್ನು ತಿದ್ದುಪಡಿ ಮಾಡಿ ತೆಗೆಯಬೇಕೆಂದು ವಿನಂತಿ ಮಾಡಿ ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟ ಯಂತ್ರಗಳ ಮೇಲೆ ಹಾಕಿರುವ ತೆರಿಗೆಯಲ್ಲಿ ಕನ್‌ಸಿಶನ್ ಕೊಡಬೇಕು ಎಂದು ವಿನಂತಿ ಮಾಡುತ್ತಾ ಇದ್ದೇನೆ, ಕಂಪ್ಯೂಟರ್ ಮೇಲೆ ಹಾರ್ಡ್‌ವೇರ್ ಮೇಲೆ ಹಾಕಿರುವ ತೆರಿಗೆ ಬಗ್ಗೆ ಹೇಳಬೇಕಾದರೆ, ಇವತ್ತು Internet Marketing ಎಂದು ಹೊಸ ಕಾನ್‌ಸೆಪ್ಟ್ ಬರುತ್ತಾ ಇದೆ ಈ ರೀತಿ ತಾವು ಹಾಕುವ ಮೂಲಕ ಹೊರ ರಾಜ್ಯಗಳಿಂದ ಪಡೆದುಕೊಳ್ಳಲು ಸಹಾಯವಾಗುತ್ತದೆ, ಇದರ ಮೂಲಕ ನಮ್ಮಲ್ಲಿರುವಂತಹ ಉತ್ಪನ್ನಗಳಿಗೆ ಮಾರಾಟ ತೆರಿಗೆ ನಾವು ಕಳೆದುಕೊಳ್ಳುತ್ತೇವೆಂಬ ಮಾಹಿತಿ ನಾನು ನೀಡಲಿಚ್ಛಿಸುತ್ತಿದ್ದೇನೆ. ಸ್ಪಷ್ಟೀಕರಣ ಅಥವಾ ಪೂರ್ವಭಾವಿ ನಿರ್ಣಯಗಳನ್ನು ಪ್ರಾಧಿಕಾರದ ಆದೇಶಗಳನ್ನು ಕಮೀಶನರ್ ಒಂದು ಸಲ ಕೊಟ್ಟ ಜಡ್ಜ್‌ಮೆಂಟನ್ನೇ ಪುನರ್‌ವಿಮರ್ಶೆ ಮಾಡಿ retrospective effect ಎಂದು ಮಾಡುವುದು

ಸರಿಯಲ್ಲ, ಅವರು ಪ್ರಥಮ ಕೊಟ್ಟಿರುವ assessment awardಗೆ ಏನು ಬದ್ದತೆ ಬರುತ್ತದೆ? ಇದರ ಬಗ್ಗೆ ನನಗೆ ಸಾಕಷ್ಟು ಸಂಶಯಗಳಿವೆ ಅದನ್ನು ಕ್ಲಾರಿಫೈ ಮಾಡಬೇಕೆಂದು ವಿನಂತಿ ಮಾಡಿ, ಟೈಲರ್ಸ್, ಚಿನ್ನದ ಕೆಲಸಗಾರರು, ರಿಕ್ಷಾಡ್ರೈವರ್‌ರಂತಹ ಅಸಂಘಟಿತ ಕಾರ್ಮಿಕರ ಬಗ್ಗೆ ತಾವು ಇನ್ನೂ ಸ್ಪಂದಿಸಿಲ್ಲ. ಅವರಿಗೆ ಕೇರಳ ರಾಜ್ಯದಲ್ಲಿರುವಂತೆ ನಿವೃತ್ತಿವೇತನ ಕೊಡುವ ಕಾರ್ಯಕ್ರಮವನ್ನು ತಾವು ಸೇರಿಸಬೇಕು, 8 ಲಕ್ಷ ಸಂಖ್ಯೆಯಲ್ಲಿರುವ ಬೀಡಿ ಕಾರ್ಮಿಕರ ಕಲ್ಯಾಣವನ್ನೂ ಸಹ ಯೋಚನೆ ಮಾಡಬೇಕು ಎಂದು ವಿನಂತಿ ಮಾಡಿ ರಿಜಿಸ್ಟ್ರೇಷನ್ ಕಛೇರಿಯಲ್ಲಿ ದೊಡ್ಡ ದೊಡ್ಡ ಕ್ಯೂನಲ್ಲಿ ನಿಂತು ಸ್ಟ್ಯಾಂಪ್‌ಗೋಸ್ಕರ ಅಲೆದಾಡುವ ಸ್ಥಿತಿ ಬಂದಿದೆ. ಕನಿಷ್ಟ franking machines ಗಳನ್ನು ಒದಗಿಸುವ ವ್ಯವಸ್ಥೆ ತಾವು ಮಾಡಿ, ಮತ್ತೆ ಸಹಕಾರಿ ಸಂಸ್ಥೆಗಳಲ್ಲಿ 63ನೇ ಕಾಯಿದೆ ಆಡಿಟ್ ರೂಲ್ 30ರ ಪ್ರಕಾರ ರಿಜಿಸ್ಟ್ರಾರ್‌ರವರ ಟರ್ನ್‌ಓವರ್ ಮೇಲೆ ಆಡಿಟ್‌ಫೀಸು ಎಂದು ಟ್ಯಾಕ್ಸ್ ವಸೂಲು ಮಾಡುತ್ತಿದ್ದಾರೆ ಒಂದು ಕಡೆ 35 ರಿಂದ 40 ಲಕ್ಷ ರೂ. ಯಷ್ಟು ಫೀಸು ಕಲೆಕ್ಟ್ ಮಾಡುತ್ತಿದ್ದಾರೆ ಅಂದರೆ ಅಲ್ಲಿ ಒಟ್ಟು 30 ದಿವಸದಲ್ಲಿ ದಿವಸಕ್ಕೆ ಒಂದು ಲಕ್ಷ ರೂ. ಕಲೆಕ್ಟ್ ಮಾಡುವ ಈ ಪದ್ಧತಿ ಯಾವುದಿದೆ ಅದನ್ನು ಪುನರ್‌ವಿಮರ್ಶೆ ಮಾಡಬೇಕು, ವೈಜ್ಞಾನಿಕವಾಗಿ ಆಡಿಟ್ ಫೀಸ್ ಕಲೆಕ್ಟ್ ಮಾಡಲು ತಾವು ಸೂಚಿಸಬೇಕು ಎಂದು ಹೇಳುತ್ತಾ ಕೊನೆಯದಾಗಿ ಆಡಳಿತ ಸುಧಾರಣೆ ತರುವ ಸಂಬಂಧದಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳು ವಾರ್ಷಿಕ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿಸುವಂತೆ ಕಡ್ಡಾಯವಾಗಿ ಆಡಿಟ್ ಮಾಡಿಸುವಂತೆ ತಾವು ಆದೇಶ ಕೊಡಬೇಕು. ಮಂಗಳೂರು ಮಹಾನಗರಪಾಲಿಕೆಯಿಂದ ಹಿಡಿದು ಕೆಲವು ಮಹಾನಗರ ಪಾಲಿಕೆಗಳ ಬಗ್ಗೆ ಅವರ ಆಡಳಿತವನ್ನು ರಿವ್ಯೂ ಮಾಡುವ ಸಂದರ್ಭದಲ್ಲಿ ನನಗೆ ಆಶ್ಚರ್ಯ ಕಾದಿತ್ತು. 5–7 ವರ್ಷಗಳಿಂದ ಆಡಿಟ್ ಆಗದಂತಹ ದುಸ್ಥಿತಿ ಬಂದಿದೆ. ಕಡ್ಡಾಯವಾಗಿ ಪ್ರತಿವರ್ಷ ಆಡಿಟಿಂಗ್ ಆಗುವ ನಿಟ್ಟಿನಲ್ಲಿ ತಾವು ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡಿ ಇ–ಅಡ್ಮಿನಿಸ್ಟ್ರೇಷನ್ ಏನಿದೆ ಸ್ಥಳೀಯ ಸಂಸ್ಥೆಗಳಿಗೆ ಕಂಪ್ಯೂಟರ್ ಕೊಡುವುದು ಮಾತ್ರವಲ್ಲ ಖರೀದಿ ಕಾಮಗಾರಿಗಳ ಸಮಗ್ರ ವಿವರಗಳೂ ವೆಬ್‌ಸೈಟ್‌ಗಳಲ್ಲಿ ಅದು ಪಾರದರ್ಶಕವಾಗಿ ಜನಸಾಮಾನ್ಯರಿಗೆ ತಿಳಿಸುವಂತಹ ಒಂದು ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ಬರುವ ರೀತಿಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿ ಕೊನೆಯದಾಗಿ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯನ್ನು 50 ಲಕ್ಷ ರೂ.ಗಳನ್ನು ತಾವು ಘೋಷಣೆ ಮಾಡಬೇಕೆಂದು ಕಳಕಳಿಯ ವಿನಂತಿಯನ್ನು ಎಲ್ಲಾ ಶಾಸಕರ ಪರವಾಗಿ ಮಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಕೊಟ್ಟಿರುವ ಅವಕಾಶಕ್ಕೆ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ)** : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರೇನು ಬಜೆಟ್‌ನ್ನು ಮಂಡನೆ ಮಾಡಿದ್ದಾರೆ, ಈ ಬಜೆಟ್ ಮಂಡನೆ ಪೂರ್ವದಲ್ಲಿ ಮಾನ್ಯ ಎಸ್.ಆರ್. ಮೋರೆಯವರು, ಮತ್ತು ಮಾನ್ಯ ಪ್ರಕಾಶ್ ಹುಕ್ಕೇರಿಯವರು ಉತ್ತರ ಕರ್ನಾಟಕ ಭಾಗದ ನಮ್ಮ ಮಂತ್ರಿಗಳು ಅವರೊಂದು ಉತ್ತರ ಕರ್ನಾಟಕ ಶಾಸಕರ ಸಭೆಯನ್ನು ಕರೆದಿದ್ದರು. ಕರೆದು ಉತ್ತರ ಕರ್ನಾಟಕದಲ್ಲಿ ಆಗಬೇಕಾದಂಥ ಹಲವಾರು ನೀರಾವರಿ ಯೋಜನೆಗಳ ಬಗ್ಗೆ, ಅಭಿವೃದ್ಧಿ ಕೆಲಸಗಳ ಬಗ್ಗೆ ಚಿಂತನೆಯನ್ನು ಮಾಡಿದರು. ಮೊದಲ ಸಲ ಈ ಪ್ರಯತ್ನವನ್ನು ಮಾಡಿದರು. ನಾವು ಅವರಿಗೆ ಅವತ್ತು ಅಭಿನಂದನೆಗಳನ್ನೂ ಕೂಡ ಸಲ್ಲಿಸಿದ್ದೇವೆ. ನಮ್ಮ ಹೊಸದಾಗಿ ಬಂದ ಶಾಸಕರುಗಳೂ ಕೂಡ ಅದರಲ್ಲಿ ಭಾಗವಹಿಸಿದ್ದರು. ಆಮೇಲೆ ನಾವು ಅವರಿಗೆ ಹೇಳಿದೆ. ನೋಡಿ, ಇದೇನೋ ಕರೆದಿದ್ದಾರೆ, ಚರ್ಚೆ ಮಾಡುತ್ತಿದ್ದಾರೆ, ಆದರೆ, ಇದರ ಫಲಿತಾಂಶ ಏನು ಎನ್ನುವುದನ್ನು

ಹೇಳುವುದಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ನಾನು ಅವತ್ತು ಹೇಳಿದ್ದೆ. ಅದು ಹಾಗೆಯೇ ಆಯಿತು. ಪಾಪ ಅವರು ಪ್ರಯತ್ನವನ್ನು ಮಾಡಿದರು. ಮಾನ್ಯ ಮೋರೆಯವರು ಮತ್ತು ಪ್ರಕಾಶ್ ಹುಕ್ಕೇರಿಯವರು. ಆದರೆ ಮಾನ್ಯ ಸಿದ್ಧರಾಮಯ್ಯನವರು ಹೈಕೋರ್ಟ್ ಪೀಠಕ್ಕೆ 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಬಿಟ್ಟರೆ ಉಳಿದ ಯಾವ ಪ್ರಸ್ತಾವನೆಗೂ ಯಾವುದೇ ರೀತಿಯ ಸ್ಪಂದನವನ್ನು ಮಾನ್ಯ ಸಿದ್ಧರಾಮಯ್ಯನವರು ಮಾಡಲಿಲ್ಲ. ಈಗ ನಾನು ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ಹೇಳುತ್ತಿದ್ದೇನೆ, ಅದು ಎಲ್ಲಾ ತಾಲ್ಲೂಕುಗಳಿಗೂ ಬರುತ್ತದೆ, ಇಡೀ ಕರ್ನಾಟಕಕ್ಕೇ ಬರುತ್ತದೆ ಅದು. ಯಾವುದ್ಯಾವುದು ಹಿಂದುಳಿದ ತಾಲ್ಲೂಕುಗಳಿದ್ದಾರೆ, ಡಾ: ನಂಜುಂಡಪ್ಪನವರು ವರದಿಯಲ್ಲಿ ಏನು ಹೇಳಿದ್ದಾರೆ, ವರ್ಷಕ್ಕೆ ಕನಿಷ್ಟ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಆ ಹಿಂದುಳಿದ ತಾಲ್ಲೂಕುಗಳಿಗೆ ಅನುದಾನವನ್ನು ಕೊಡುವಂಥದ್ದು. ಅದೂ ಕೂಡ ನಿಮ್ಮ ಕಡೆಯಿಂದ ಆಗಿಲ್ಲ. ಕೊನೆಗೆ ಒಂದಿಷ್ಟು ಪ್ರಯತ್ನ ಕೂಡ ತಮ್ಮ ಕಡೆಯಿಂದ ಆಗಲಿಲ್ಲ. ಹಾಗಾಗಿ ಇವತ್ತು ಏನು ಕಾಮನ್ ಮಿನಿಮಮ್ ಪ್ರೋಗ್ರಾಮ್‌ನಲ್ಲಿ ಡಾ: ನಂಜುಂಡಪ್ಪನವರ ವರದಿಯ ಅನುಷ್ಠಾನ ಅದು ಹಾಗೆಯೇ ಇದೆ. ಸುಮ್ಮನೆ ಮಾನ್ಯ ಎಸ್.ಎಂ. ಕೃಷ್ಣ ಅವರು ಮೂರು ವರ್ಷ ಹೇಳಿಕೊಂಡು ಬಂದರು, ಅದೇ ಬಹುಶಃ ಮಾನ್ಯ ಸಿದ್ಧರಾಮಯ್ಯನವರೇ ಇನ್ನೂ ನಾಲ್ಕು ಬಜೆಟ್‌ಗಳನ್ನು ಮಂಡನೆ ಮಾಡಿ, ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ಇದೇ ರೀತಿ ಇರುತ್ತದೆ. ಅದಕ್ಕೆ ಬದ್ದರಿದ್ದೇವೆ. ಎನ್ನುವ ಮಾತು ಇರುತ್ತದೆ. ಅದಕ್ಕೆ ಅದರ ಬಗ್ಗೆಯೂ ಏನೂ ಪ್ರಯತ್ನವಾಗಲಿಲ್ಲ. ಕೊನೆಯ ಪಕ್ಷ ಒಂದಿಷ್ಟು 500 ಕೋಟಿ ರೂಪಾಯಿಗಳನ್ನು ಕೊಟ್ಟು ನಾನು ಪ್ರಾರಂಭ ಮಾಡುತ್ತೇನೆ ಎನ್ನುವುದು ಪ್ರಾಥಮಿಕ ಹಂತದಲ್ಲಿ ಮಾಡಬಹುದಾಗಿತ್ತು. ಅದನ್ನೂ ಮಾಡಲಿಲ್ಲ. ಹೀಗಾಗಿ ನಾವೇನು ವರದಿಗಳನ್ನು ತರಿಸುತ್ತೇವೆ, ಇದಕ್ಕೇನೂ ಕಿಮ್ಮತ್ತು ಇಲ್ಲದಂಥ ಪರಿಸ್ಥಿತಿಯಾಗಿದೆ. ಯಾವುದೇ ಸರ್ಕಾರಗಳು ಹಾಗೆಯೇ ಮಾಡಿದೆ. ಇವತ್ತು ಹಾರ್ನಳ್ಳಿ ರಾಮಸ್ವಾಮಿ ವರದಿ ಇರಬಹುದು, ಕರ ತೆರಿಗೆ ಸುಧಾರಣಾ ವರದಿ ಇರಬಹುದು, ನಮ್ಮ ವಾಟಾಳ್ ನಾಗರಾಜ್‌ರವರು ಒಂದು ವರದಿಯನ್ನು ಕೊಟ್ಟರು. ಹೊರ ನಾಡ ಕನ್ನಡಿಗರ ಗಡಿನಾಡು ಅಭಿವೃದ್ಧಿ ಬಗ್ಗೆ, ಆದರೆ ಸರ್ಕಾರದಿಂದ ಯಾವುದೇ ಸ್ಪಂದನ ಇಲ್ಲ. ಕೊನೆಯ ಪಕ್ಷ ಬಯಲುಸೀಮೆ ಅಭಿವೃದ್ಧಿ ಮಂಡಳಿ, ಆಮೇಲೆ ಮಲೆನಾಡು ಅಭಿವೃದ್ಧಿ ಮಂಡಳಿ, ಇವುಗಳಿಗೆ ಏನೂ ಹೆಚ್ಚಿನ ಅನುದಾನ ಇಲ್ಲ. ಆ ಭಾಗದಿಂದ ಬಂದ ಶಾಸಕರುಗಳು ಏನು ಮಾಡಬೇಕು? ಕೊನೆಯ ಪಕ್ಷ ಇವುಗಳು ಯಾವುದೂ ಬೇಡ, ಹಿಂದೆ ನಾಲ್ಕು ವರ್ಷದಿಂದ ಹೋರಾಟ ಮಾಡಿದೆವು. ಕೊನೆಯ ಪಕ್ಷ ಇವತ್ತು ಶಾಸಕರೆಲ್ಲರದೂ ಒಂದು ಬೇಡಿಕೆ ಇದೆ, ಒಂದೊಂದು ಕ್ಷೇತ್ರಕ್ಕೆ ಶಾಸಕರ ಅಭಿವೃದ್ಧಿ ನಿಧಿ ಅದನ್ನಾದರೂ ಹೆಚ್ಚು ಮಾಡಬೇಕು. ಏಕೆಂದರೆ ಎಂಪಿ ಗಳಿಗೆ ಎರಡು ಕೋಟಿ ರೂಪಾಯಿಗಳನ್ನು ನಿಧಿಗೆಂದು ಕೊಡುತ್ತಿದ್ದಾರೆ. ಆದರೆ ಇವತ್ತು ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ ಒಬ್ಬ ಶಾಸಕರು ಹತ್ತು, ಇಪ್ಪತ್ತು, ಐವತ್ತು ಸಾಧಿರ, ಒಂದು ಲಕ್ಷ ರೂ.ವರೆಗೆ ಏನಾದರೂ ಅರ್ಜೆಂಟ್ ಆಗಿ ಕಾಮಗಾರಿಯನ್ನು ಮಾಡಿಸಬೇಕೆಂದರೆ ಅದಕ್ಕೂ ಯಾವುದೇ ಅಧಿಕಾರ ಶಾಸಕರಿಗೆ ಇಲ್ಲ. ಎಲ್ಲಾ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಿಗೆ ಕೊಟ್ಟಿದ್ದೇವೆ. ಅದಕ್ಕೆ ಅಧಿಕಾರ ಕೊಟ್ಟಿರುವುದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೂ ಇವತ್ತು ಶಾಸಕರೇನಾದರೂ ತುರ್ತಾಗಿ ಕೆಲಸವನ್ನು ಮಾಡಬೇಕೆಂದರೆ ಅವರಿಗೆ ಯಾವುದೇ ಅಧಿಕಾರ ಇಲ್ಲ. ಕೊನೆಯ ಪಕ್ಷ ನಮ್ಮ ಶಾಸಕರಿಗೆ ಅವರ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಆ ಒಂದು ಕ್ಷೇತ್ರದ ಅಭಿವೃದ್ಧಿ ಕೆಲಸವನ್ನು ಮಾಡುವುದಕ್ಕೆ

ಕನಿಷ್ಟ ಐವತ್ತು ಲಕ್ಷ ರೂಪಾಯಿಗಳ ನಿಧಿಯನ್ನು ಮಾಡಬೇಕೆಂದು ನಾನು ಒತ್ತಾಯಮಾಡುತ್ತಿದ್ದೇನೆ. ದಯವಿಟ್ಟು ಮಾನ್ಯ ಸಿದ್ಧರಾಮಯ್ಯನವರು ತಾವು ಉತ್ತರ ಕೊಡುವ ಸಂದರ್ಭದಲ್ಲಿ ಇದಕ್ಕೆ ಸ್ಪಂದನ ಮಾಡುತ್ತೀರಿ ಎನ್ನುವ ನಿರೀಕ್ಷೆಯನ್ನು ನಾನು ಇಟ್ಟುಕೊಂಡಿದ್ದೇನೆ. ಏಕೆಂದರೆ ಹಿಂದೆ ಮಾನ್ಯ ಎಸ್.ಎಂ. ಕೃಷ್ಣರವರು ಇದರ ಬಗ್ಗೆ ಒಂದು ಅನೌನ್ಸ್ ಮಾಡಿದ್ದರು. ಆದರೂ ಒಂದು ಪೈಸಾ ಕೂಡ ಬಿಡುಗಡೆಯಾಗಲಿಲ್ಲ. ಕೊನೆಯ ಪಕ್ಷ ತಾವು ಬಜೆಟ್‌ನಲ್ಲಿ ಅನೌನ್ಸ್ ಮಾಡಲಿಲ್ಲ. ಕೊನೆಗೆ ಈಗಲಾದರೂ ತಾವು ತಮ್ಮ ಉತ್ತರದಲ್ಲಿ ಆ ಬಜೆಟ್‌ನಲ್ಲಿ ನಾನು ಅವಕಾಶವನ್ನು ಮಾಡಿಕೊಡುತ್ತೇನೆಂದು ತಮ್ಮ ಕಡೆಯಿಂದ ಸ್ಪಂದನವಾಗಲಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿ ಇವತ್ತು ತಾವು ಈ ಕೆಲವೊಂದು ಸಮಸ್ಯೆಗಳಿಗೆ ಬೆಳೆ ವಿಮೆ ಬಗ್ಗೆ ನೀವು 241 ಕೋಟಿ ರೂ. ಬಗ್ಗೆ ಹೇಳಿದಿರಿ. ಇವತ್ತು ಮೂರು ಸಾಲಿನ 2002–03 ರಿಂದ 2003–04 ರಿಂದ ಈ ಹಿಂಗಾರು ಮುಂಗಾರು ಮೂರು ಸಾಲಿನಿಂದ ಹಣ ಬಿಡುಗಡೆಯಾಗಿಲ್ಲ. ಮೊನ್ನೆ ತಾವೇನು ಕೆಲವೊಂದು ಹಣವನ್ನು ಬಿಡುಗಡೆ ಮಾಡಿದ್ದೀರಿ, ಅದು 2002–03ನೇ ಸಾಲಿಗೆ ಸಂಬಂಧಪಟ್ಟಿದ್ದು. ಈಗ ಕಳೆದ ವರ್ಷದ ಸಾಲಿನಲ್ಲಿ ಬೆಳೆ ವಿಮೆ ಹಣ ಬಿಡುಗಡೆಯಾಗಿಲ್ಲ. ಸಾವಿರಾರು ಕೋಟಿ ರೂಪಾಯಿಗಳನ್ನು ನಮ್ಮ ರೈತ ಬಾಂಧವರಿಗೆ ಇವತ್ತು ನೀವು ಬಿಡುಗಡೆ ಮಾಡಬೇಕು. ನಾಲ್ಕು ವರ್ಷದಿಂದ ಬರಗಾಲ ಇದೆ. ಇವತ್ತೇನಾದರೂ ಬಿತ್ತನೆ ಮಾಡಬೇಕು, ಏನಾದರೂ ಬೀಜ ಖರೀದಿ ಮಾಡಬೇಕು, ಗೊಬ್ಬರವನ್ನು ಖರೀದಿ ಮಾಡಬೇಕೆಂದರೆ ಅವರ ಕೈಯಲ್ಲಿ ಹಣ ಇಲ್ಲ. ಅದಕ್ಕಾಗಿ ನಾನು ಮಾನ್ಯ ಸಿದ್ಧರಾಮಯ್ಯನವರಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ, ತಕ್ಷಣವೇ ಎಷ್ಟು ಬೆಳೆ ವಿಮೆ ಹಣ ಬಿಡುಗಡೆಯಾಗಬೇಕಾಗಿದೆ, ಆ ಹಣವನ್ನು ತಕ್ಷಣವೇ ಬಿಡುಗಡೆ ಮಾಡಿದರೆ ನೀವು ರೈತರ ಪರವಾಗಿ ಇವತ್ತು ಗ್ರಾಮೀಣಾಭಿವೃದ್ಧಿ ಪರವಾಗಿ ರೈತರ ಪರವಾಗಿ ನಾವು ಇದ್ದೇವೆಂದು ತಾವೇನು ಹೇಳಿಕೊಳ್ಳುತ್ತಿದ್ದೀರಿ, ಅದಕ್ಕೇನಾದರೂ ಅರ್ಥಪೂರ್ಣತೆ ಬರಬೇಕಾದರೆ ದಯವಿಟ್ಟು ತಕ್ಷಣವೇ ಈ ಬೆಳೆ ವಿಮೆ ಹಣವನ್ನು ಬಿಡುಗಡೆ ಮಾಡುವಂಥ ಕೆಲಸವನ್ನು ತಾವು ಮೊಟ್ಟಮೊದಲು ಮಾಡಬೇಕೆನ್ನುವಂಥ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಮತ್ತು ಇನ್ನೊಂದು ಕಳಸಾಬಂಡೂರಿ ನಾಲಾ ಇದರ ಬಗ್ಗೆ ನಿನ್ನೆ ಮಾನ್ಯ ಡಿ.ಆರ್. ಪಾಟೀಲರು ಮಾತನಾಡಿದ್ದಾರೆ, ಮತ್ತೆ ಇನ್ನೂ ಹಲವಾರು ಸದಸ್ಯರುಗಳೂ ಕೂಡ ಮಾತನಾಡಿದ್ದಾರೆ. ನಾನೇನು ಇವತ್ತು ಹೇಳುತ್ತಿದ್ದೇನೆಂದರೆ ಇವತ್ತು ಕೇಂದ್ರ ಸರ್ಕಾರದಲ್ಲಿ "Kept in abeyance" ಎನ್ನುವಂಥದ್ದು ಇವತ್ತು ಅಲ್ಲಿ ತಡೆಯಾಜ್ಞೆಯಾಗಿದೆ, ಕಳಸಾಬಂಡೂರಿ ನಾಲಾ ಯೋಜನೆಗೆ ಕ್ಲಿಯರೆನ್ಸ್ ಆಗಿತ್ತು, ಒಂದು ಹಂತದಲ್ಲಿ ಕೇಂದ್ರ ಸರ್ಕಾರ ಅನುಮತಿಯನ್ನು ಕೊಟ್ಟಿತ್ತು. ಆದರೆ "Kept in abeyance" ಎಂದು ಹೇಳಿ ಮತ್ತೊಂದು ತಡೆಯಾಜ್ಞೆ ಬಂದಿದ್ದರಿಂದ ಇವತ್ತು ಕಳಸಾಬಂಡೂರಿ ನಾಲಾ ಯೋಜನೆ ಮಲಪ್ರಭಾ ನದಿಗೆ ಏಳೂವರೆ ಟಿಎಂಸಿ ನೀರು ಇವತ್ತು ಅಲ್ಲಿ ಹೆಚ್ಚಿನ ನೀರಿನ ಹರಿವು ಮಲಪ್ರಭಾ ನದಿಗೆ ಬರುವಂಥ ಯೋಜನೆ ಅದು. ಹೀಗಾಗಿ ಆ ಕಳಸಾಬಂಡೂರಿ ನಾಲಾ ಯೋಜನೆಯನ್ನು ಅನುಷ್ಟಾನ ಮಾಡುವಂಥದ್ದು ಬಹಳ ಪ್ರಾಮುಖ್ಯವಾದುದು. ಅದಕ್ಕಾಗಿ ನಾನು ತಮ್ಮಲ್ಲಿ ಇವತ್ತು ಮನವಿಯನ್ನು ಮಾಡುತ್ತಿದ್ದೇನೆ, ಮತ್ತು ಮುಖ್ಯಮಂತ್ರಿಗಳಲ್ಲಿ ನಾವು ಈಗಾಗಲೇ ಒಂದು ಮನವಿ ಪತ್ರವನ್ನೂ ಸಹ ಕೊಟ್ಟಿದ್ದೇವೆ. ಡೆಲಿಗೇಷನನ್ನು ತೆಗೆದುಕೊಂಡು ಹೋಗಿ ಕೊಟ್ಟಿದ್ದೇವೆ. ಆ ಭಾಗದ ಶಾಸಕರು ಎಲ್ಲರೂ ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ಈಗಾಗಲೇ ಮುಖ್ಯಮಂತ್ರಿ ಮಾನ್ಯ ಧರ್ಮಸಿಂಗ್ ಅವರನ್ನು ಕಂಡಿದ್ದೇವೆ. ನಾವು ಒತ್ತಾಯವನ್ನು ಮಾಡಿದ್ದೇವೆ,

ತಕ್ಷಣವೇ ಇದಕ್ಕೊಂದು ಸರ್ವಪಕ್ಷದ ಸಭೆಯನ್ನು ಕರೆಯುವಂಥದ್ದು ಮತ್ತು ಪ್ರಧಾನಮಂತ್ರಿಗಳ ಕಡೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ ತಕ್ಷಣವೇ ಕೇಂದ್ರ ಸರ್ಕಾರದಿಂದ ಇದಕ್ಕೇನು ಅಡೆತಡೆಗಳು ಇದ್ದಾವೆ, ಅದನ್ನು ಸರಿಯಾದ ರೀತಿಯಲ್ಲಿ ಅವರಿಂದ ಕ್ಲಿಯರೆನ್ಸ್ ತೆಗೆದುಕೊಳ್ಳುವುದು ಆಗಬೇಕಾಗಿದೆ. ಅದಕ್ಕಾಗಿ ದಯವಿಟ್ಟು ತಾವು ಅದಕ್ಕೆ ಮನಸ್ಸು ಮಾಡಿ ಆ ಕಳಸಾಬಂಡೂರಿ ನಾಲಾ ಯೋಜನೆ ಅನುಷ್ಠಾನವಾಗುವ ರೀತಿಯಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ಮತ್ತು ಬಜೆಟ್‌ನಲ್ಲಿ ಕೂಡ ಪ್ರತ್ಯೇಕವಾಗಿ ಈ ಕಳಸಾಬಂಡೂರಿ ನಾಲಾ ಯೋಜನೆಗೆ ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ತಾವು ನಿಗದಿ ಮಾಡಬೇಕಾಗುತ್ತದೆ. ಇವತ್ತು ಕಾವೇರಿ ಕಣಿವೆ ವಿಚಾರವಾಗಿ ಇರಬಹುದು, ಕೃಷ್ಣಾ ಕಣಿವೆ ವಿಚಾರ ಇರಬಹುದು, ಏನು ಪ್ರತ್ಯೇಕವಾದ ಹಣವನ್ನು ನೀವು ನಿಗದಿ ಮಾಡುತ್ತೀರಿ, ಅದೇ ರೀತಿ ಕಳಸಾಬಂಡೂರಿ ನಾಲಾ ಯೋಜನೆಗೂ ಸಹಿತ ತಾವು ಹಣವನ್ನು ಬಜೆಟ್‌ನಲ್ಲಿ ನಿಗದಿ ಮಾಡಬೇಕೆಂದು ನನ್ನ ಪ್ರಸ್ತಾವನೆ ಇದೆ. ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ತಮ್ಮ ಕಾರ್ಯದರ್ಶಿಯವರಿಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ. ನಾನು ಮೋಷನ್ ಒಂದನ್ನು ಮೂವ್ ಮಾಡಿದ್ದೇನೆ. ಆ ಮೋಷನನ್ನು ನಾನು ಓದಿ ಹೇಳುತ್ತಿದ್ದೇನೆ. ಅದು ಏನೆಂದರೆ, "ಕಳಸಾಬಂಡೂರಿ ನಾಲಾ ಹಾಗೂ ಮಲಪ್ರಭಾ ನದಿ ಯೋಜನೆ ಜೋಡಣೆಯಾಗಿ ಈಗ ಸರ್ಕಾರ ಮಂಡಿಸಿರುವ 2004–05ನೇ ಸಾಲಿನ ಆಯವ್ಯಯದಲ್ಲಿ ನೂರು ಕೋಟಿ ರೂಪಾಯಿಗಳನ್ನು ನಿಗದಿಪಡಿಸಬೇಕು ಎನ್ನುವಂಥದ್ದು" ಆ ಭಾಗದ ಐದಾರು ಜನ ಶಾಸಕರು ಕೂಡಿಕೊಂಡು ಈ ಪ್ರಸ್ತಾವನೆಯನ್ನು ನಾನು ಈ ಸದನದ ಮುಂದೆ ಇಟ್ಟಿದ್ದೇನೆ. ದಯವಿಟ್ಟು ಈ ಪ್ರಸ್ತಾವನೆಗೆ ತಾವು ಅನುಮೋದನೆಯನ್ನು ಕೊಡಬೇಕೆಂಬ ವಿನಂತಿಯನ್ನು ನಾನು ಮಾನ್ಯ ಅಧ್ಯಕ್ಷರಲ್ಲಿ ಮಾಡಿಕೊಂಡು ಬಜೆಟ್‌ನಲ್ಲಿ ಇದಕ್ಕಾಗಿ ನೂರು ಕೋಟಿ ರೂಪಾಯಿಗಳನ್ನು ತಾವು ತೆಗೆದಿಡಬೇಕು ಪ್ರತ್ಯೇಕವಾಗಿ, ಅಂದರೆ ಆ ಯೋಜನೆಗೆ ಕ್ಲಿಯರೆನ್ಸ್ ಸಿಗುತ್ತದೆ, ತಕ್ಷಣವೇ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯ ಇದೆ. ಅದರಿಂದ ಏಳೂವರೆ ಟಿಎಂಸಿ ನೀರು ಮಲಪ್ರಭಾ ನದಿಗೆ ಬರುತ್ತದೆ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನಿಮ್ಮ ಪ್ರಸ್ತಾವನೆ ಏನು ಇದೆ, ಅದರ ಬಗ್ಗೆ ಸೆಪರೇಟ್ ಆಗಿ ನೀವು ನಿರ್ಣಯವನ್ನು ತರುವುದಕ್ಕಾಗುವುದಿಲ್ಲ ಬಜೆಟ್ ಮೇಲೆ, ಇಲ್ಲಿ ಇಡಿ ಎಂದು. ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ನಾನು ಅದನ್ನು ಅಲೋ ಮಾಡುವುದಕ್ಕಾಗುವುದಿಲ್ಲ. ಈಟ್ ಮೋಷನ್ ತರಬಹುದೇ ಹೊರತು ಬೇರೆ ಆಗುವುದಿಲ್ಲ. ನೀವು ಪ್ರಸ್ತಾಪ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಪ್ರಸ್ತಾಪ ಮಾಡಿದ್ದೇನೆ. ಅದರ ಬಗ್ಗೆ ತಾವೇನು ನಿರ್ಣಯವನ್ನು ತೆಗೆದುಕೊಳ್ಳುತ್ತೀರೋ ಅದು ತಮಗೆ ಬಿಟ್ಟಿದ್ದು.

ಅಧ್ಯಕ್ಷರು : ಮೋಷನನ್ನು ಮೂವ್ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಬಜೆಟ್‌ನಲ್ಲಿ ಆ ರೀತಿ ಒಂದು ಅನುಕೂಲ ಮಾಡಿಕೊಡಲಿ ಎಂದು ನಮ್ಮ ಬೇಡಿಕೆ ಇದೆ. ತಮ್ಮ ಗಮನಕ್ಕೆ ತರುವಂಥದ್ದು ಸದನದ ಗಮನಕ್ಕೆ ತರುವಂಥದ್ದು ಬಹಳ ಪ್ರಾಮುಖ್ಯವಾಗಿರುವುದರಿಂದ ನಾನು ತೆಗೆದುಕೊಂಡು ಬಂದಿದ್ದೇನೆ.

ಅಧ್ಯಕ್ಷರು : ಆಯಿತು.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕಾಗಿ ಮಾನ್ಯ ಸಿದ್ಧರಾಮಯ್ಯನವರು ಇದಕ್ಕೆ ಪ್ರತ್ಯೇಕವಾಗಿ ಹಣವನ್ನು ನಿಗದಿ ಮಾಡಬೇಕು. ನೀರಾವರಿ ನಿಗಮದಲ್ಲಿ ಹಣ ಇದೆ, ಅದರಲ್ಲಿ ನಾವು ಖರ್ಚು ಮಾಡುತ್ತೇವೆ ಎನ್ನುವುದು ಬೇರೆ. ಆದರೆ ಇದಕ್ಕೆ ಪ್ರತ್ಯೇಕವಾಗಿ ಹಣವನ್ನು ನಿಗದಿ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಸದನದಲ್ಲಿ ಮೊಬೈಲ್ ಫೋನ್ ತೆಗೆದುಕೊಂಡು ಬಂದಿರುವ ಬಗ್ಗೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಯಾರೋ ಮೊಬೈಲ್ ಫೋನನ್ನು ತೆಗೆದುಕೊಂಡು ಹೌಸ್ ಒಳಗೆ ಬರುತ್ತಾರೆ. I think ನೀವು ಬಹಳ strict ಆಗಬೇಕಾಗುತ್ತದೆ. You will have to suspend the Member. What they have converted this House into? Is this a club?

ಅಧ್ಯಕ್ಷರು : ನಾನು ವಿನಂತಿಯನ್ನು ಮಾಡಿದೆ.

Sri K.R. Ramesh Kumar : Who ever is the Member let him be suspended.

ಶ್ರೀ ಅರಗ ಜ್ಞಾನೇಂದ್ರ : ಒಂದು ಮೆಷಿನ್ ಬರುತ್ತದೆ ಸಾರ್, ಒಳಗಡೆ ಬಂದ ಕೂಡಲೇ ಜಾಮ್ ಆಗಿಬಿಡುತ್ತದೆ. ಈ ವ್ಯವಸ್ಥೆ ಲೋಕಸಭೆಯಲ್ಲಿ ಇದೆ.

Sri K.R. Ramesh Kumar : They can't take the House so lightly I say.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಒಳಗೆ ಬಂದು ಮಾತನಾಡುತ್ತಾರೆ. ಈ ರೀತಿಯಾದರೆ ಸಭೆಗಳಿಗೆ ಗೌರವ ಘನತೆಯೇನಾದರೂ ಉಳಿಯುತ್ತದೆಯೇ?

4. ಅಧ್ಯಕ್ಷರ ತೀರ್ಪು

ಅಧ್ಯಕ್ಷರು : ಆ ಜಾಮ್ ಆಗುವ ಯಂತ್ರವನ್ನು ಹಾಕೋಣ ಅದನ್ನು ಮಾಡಿಸುತ್ತೇನೆ. ಮುಂದಿನ ಅಧಿವೇಶನದಲ್ಲಿ ಅದನ್ನು ಮಾಡಬೇಕಾಗುತ್ತದೆ. ಏಕೆಂದರೆ ಇಲ್ಲಿ ಎಷ್ಟೇ ವಿನಂತಿ ಮಾಡಿದರೂ ಶಾಸನ ಮಾಡುತ್ತಿರುವ ಶಾಸಕರುಗಳೇ ನಿರ್ದೇಶನ ಕೊಟ್ಟರೂ ಫಾಲೋ ಮಾಡುತ್ತಿಲ್ಲ. ಆ ಕಾರಣದಿಂದ ಆ ಯಂತ್ರದ ವ್ಯವಸ್ಥೆಯನ್ನು ಮುಂದಿನ ಸಾರಿ ಮಾಡೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಯಾರಿಗೆ ಗೌರವದ ಮಾತು ಅರ್ಥವಾಗುವುದಿಲ್ಲ. ಅವರಿಗೆ ನೀವು ನಿಮ್ಮ ಅಧಿಕಾರವನ್ನು ಉಪಯೋಗಿಸಿ ಶಿಕ್ಷೆಯನ್ನು ಕೊಡಬೇಕಾಗುತ್ತದೆ. ನಿಮ್ಮ ಭಾಷೆ ಅರ್ಥವಾಗುವುದಿಲ್ಲ. ಅರ್ಥವಾಗುವ ಭಾಷೆಯನ್ನು ಬಳಸುತ್ತೇನೆ ಎಂದು ಹೇಳಿ ತಾವು ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ. ಇಲ್ಲದೆ ಹೋದರೆ ಈ ಸದನದ ಘನತೆ ಹಾಳಾಗಿ ಹೋಗುತ್ತದೆ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, please assert your authority.

ಶ್ರೀ ಅರಗ ಜ್ಞಾನೇಂದ್ರ : ಆ ಯಂತ್ರವನ್ನು ಹಾಕಿ ಸಾರ್.